ಸಂಪುಟ 01 | ಸಂಚಿಕೆ 104 | ಭಾನುವಾರ 01 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ NGO ದಿನ**

ವಿಶ್ವ NGO ದಿನವು ಎಲ್ಲಾ ಸರ್ಕಾರೇತರ ಮತ್ತು ಲಾಭರಹಿತ ಸಂಸ್ಥೆಗಳನ್ನು ಮತ್ತು ಸಮಾಜಕ್ಕೆ ಕೊಡುಗೆ ನೀಡುವ ಅವುಗಳ ಹಿಂದಿರುವ ಜನರನ್ನು ಗುರುತಿಸಲು, ಆಚರಿಸಲು ಮತ್ತು ಗೌರವಿಸಲು ಸಮರ್ಪಿತವಾಗಿದೆ.

**2) ಚಂದ್ರಶೇಖರ್ ಆಜಾದ್. ಅವರ ಪುಣ್ಯ ಸ್ಮರಣೆ**

1931 ರಲ್ಲಿ ಅಲಹಾಬಾದ್‌ನ ಆಲ್ಫ್ರೆಡ್ ಪಾರ್ಕ್‌ನಲ್ಲಿ (ಈಗ ಚಂದ್ರಶೇಖರ್ ಆಜಾದ್ ಪಾರ್ಕ್) 24 ನೇ ವಯಸ್ಸಿನಲ್ಲಿ ನಿಧನರಾದ ಪ್ರಸಿದ್ಧ ಕ್ರಾಂತಿಕಾರಿ ಹುತಾತ್ಮರಾದ ಚಂದ್ರಶೇಖರ್ ಆಜಾದ್ ಅವರ ಪುಣ್ಯತಿಥಿಯನ್ನು ಫೆಬ್ರವರಿ 27 ರಂದು ಆಚರಿಸಲಾಗುತ್ತದೆ. ಬ್ರಿಟಿಷ್ ಪೊಲೀಸರಿಂದ ಸೆರೆಯಾಗುವುದನ್ನು ತಪ್ಪಿಸಲು ಅವರು ಸ್ವತಃ ಗುಂಡು ಹಾರಿಸಿಕೊಂಡರು.

## ಸುಭಾಷಿತ

ಗುರಿಯಿದ್ದು ಪ್ರಯತ್ನಿಸದೇ ಇದ್ದರೆ ಅದು ಬರೀ ಕನಸು, ಗುರಿಯಿಲ್ಲದೆ ಪ್ರಯತ್ನಿಸುವುದು ಟೈಮ್ ಪಾಸ್, ಗುರಿ ಹಾಗೂ ಪ್ರಯತ್ನ ಎರಡೂ ಇದ್ದರೆ ನೀವು ಜಗತ್ತನ್ನೇ ಬದಲಾಯಿಸಬಹುದು

ಸುಧಾಮೂರ್ತಿ

## ದ್ವಿತೀಯ ಪಿಯುಸಿ ಪರೀಕ್ಷೆ: 715 ವಿದ್ಯಾರ್ಥಿಗಳು ಹಾಜರು 35 ಗೈರು

ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಪಟ್ಟಣದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜ್ ಮತ್ತು ಸರಕಾರಿ ಬಾಲಕರ ಪದವಿ ಪೂರ್ವ ಎರಡು ಪರೀಕ್ಷಾ ಕೇಂದ್ರಗಳಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಪ್ರಥಮ ಭಾಷೆ ಕನ್ನಡ ವಿಷಯದ ಪರೀಕ್ಷೆ ಶನಿವಾರ ನಡೆದಿದ್ದು,**

ಈ ಪರೀಕ್ಷೆಯಲ್ಲಿ ಒಟ್ಟು 760 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಇದರಲ್ಲಿ ಒಟ್ಟು 725 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. 35 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಪರೀಕ್ಷ ಕೇಂದ್ರದ ಸುತ್ತಲೂ 100 ಕೀ.ಮೀ ರೊಳಗೆ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ಸ್ಥಳೀಯ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗ್ಯಾರಂಟಿ ಯೋಜನೆ ನಮ್ಮ ವಾಗ್ದಾನ :ಹೊರೆಯಾದರೂ ಕೊಟ್ಟ ಮಾತಿನಂತೆ ಮುಂದುವರಿಯಬೇಕು; ಡಿ.ಕೆ ಸುರೇಶ್

**ಬೆಂಗಳೂರು: ಹೊರೆಯಾದರೂ ಕೂಡ ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನ ಸರ್ಕಾರ ಈಡೇ–ರಿಸಬೇಕು. ಇಲ್ಲದಿದ್ರೆ ಗ್ಯಾರಂಟಿ ಬಗ್ಗೆ ಹೇಳುವ ಮುಂಚಿತವಾಗಿ, ಮಾತು ಕೊಡುವುದಕ್ಕಿಂತ ಮುಂಚಿತವಾಗಿ ಚಿಂತನೆ ಮಾಡಬೇಕಾಗಿತ್ತು ಎಂದು ಮಾಜಿ ಸಂಸದ ಡಿಕೆ ಸುರೇಶ್ ಹೇಳಿದರು.**

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಇತ್ತೀಚೆಗಷ್ಟೇ ಡಿಸಿಎಂ ಡಿಕೆ ಶಿವಕುಮಾರ್ ಗ್ಯಾರಂಟಿಗಳಿಂದ ಸರ್ಕಾರಕ್ಕೆ ಹೊರೆ ಆಗುತ್ತಿದೆ ಎಂದು ಹೇಳಿದ್ದರು. ಈ ಸಂಬಂಧ ಪ್ರತಿಕ್ರಿಯಿಸಿದ ಅವರು, ಗ್ಯಾರಂಟಿ ನಮ್ಮ ವಾಗ್ದಾನ. ಕರ್ನಾಟಕದ ಜನರಿಗೆ ಕೊಟ್ಟ ವಾಗ್ದಾನ, ಆ ವಾಗ್ದಾನದಂತೆ ನಡೆಯಬೇಕು ಎಂದರು. ಯಾರು ಚುನಾವಣೆ ಎದುರಿಸಿದ್ರೋ ಅವರೆಲ್ಲ ಜನರಿಗೆ ನಂಬಿಕೆ ಕೊಟ್ಟಿದ್ದಾರೆ. ಹೊರೆಯಾದರೂ ಆಗಲಿ, ಏನಾದರೂ ಆಗ್ಲಿ ಕೊಟ್ಟ ಮಾತನ್ನ ಈಡೇರಿಸಲೇಬೇಕು.

ಹೊರೆ ಆಗುತ್ತೆ ಅನ್ನೋದಾದ್ರೆ ಗ್ಯಾರಂಟಿ ಬಗ್ಗೆ ಹೇಳುವ ಮುನ್ನ, ಮಾತು ಕೊಡೋದಕ್ಕಿಂತ ಮುಂಚಿತವಾಗಿ ಚಿಂತನೆ ಮಾಡಬೇಕಾಗಿತ್ತು. ಈಗ ಮಾತು ಕೊಟ್ಟಾಗಿದೆ, ಅದರಂತೆ ನಡೆದುಕೊಳ್ಳಬೇಕು. 5 ವರ್ಷಗಳ ಕಾಲ ಏನೇ ಕಷ್ಟ ಆದ್ರೂ ಆ ಗ್ಯಾರಂಟಿಗಳನ್ನ ರಾಜ್ಯದ ಜನರಿಗೆ ನೀಡಬೇಕು ಎಂದು ಒತ್ತಾಯಿಸಿದರು. ಸಿರಿವಂತರು ಗ್ಯಾರಂಟಿ ತೆಗೆದುಕೊಳ್ತಿದ್ರೆ ಅದು ತಪ್ಪು ಎಂದು ಆಕ್ಷೇಪಿಸಿದರು. ಗ್ಯಾರಂಟಿ



ಯೋಜನೆ ಯಾರು ಅಸಹಾಯಕರು, ಜೀವನ ನಡೆಸಲು ಕಷ್ಟವಿದೆ, ಯಾರು ಬದುಕಲ್ಲಿ ಹೋರಾಟ ಮಾಡ್ತಿದ್ದಾರೆ, ಅಂಥವರಿಗೆ ಆ ಯೋಜನೆಗಳು ಇರುವಂಥದ್ದು. ಸಿರಿವಂತರು ತೆಗೆದುಕೊಳ್ತಿದ್ರೆ ತಪ್ಪು ಎಂದು ಕಿವಿಮಾತು ಹೇಳಿದ್ರು. ಹಣೆ ಬರಹದಲ್ಲಿ ಬರೆದಿದ್ದರೆ ನನ್ನ ಅಣ್ಣ ಸಿಎಂ ಆಗುತ್ತಾರೆ. ಹಣೆಬರಹ ಇಲ್ಲ ಎಂದರೆ ಯಾರೂ ಏನೂ ಮಾಡಲು ಆಗುವುದಿಲ್ಲ" ಎಂದು ಬಮೂಲ್ ಅಧ್ಯಕ್ಷರಾದ ಡಿ.ಕೆ. ಸುರೇಶ್ ಅವರು ತಿಳಿಸಿದರು.

ನೀವು ಶಸ್ತ್ರತ್ಯಾಗ ಮಾಡಿದ್ದೀರಾ ಎಂದು ಕೇಳಿದಾಗ, "ತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ? ಶಸ್ತ್ರವೇ ಇಲ್ಲವಲ್ಲ. ಶಸ್ತ್ರ ಇದೆ ಎಂದು ನಾನು ಯಾವಾಗ ಹೇಳಿದ್ದೆ. ಶಸ್ತ್ರವೇ ಇಲ್ಲದಿದ್ದಾಗ ಶಸ್ತ್ರತ್ಯಾಗದ ಪ್ರಶ್ನೆಯೇ ಬಾರದು" ಎಂದು ಕೇಳಿದರು. ತಾಳ್ಮೆಯ ಅಸ್ತ್ರ ಇದೆ ಎಂದಿದ್ದೀರಿ ಎಂದಾಗ, "ಈಗಲೂ ತಾಳ್ಮೆ ಇರಲಿ ಎಂದು ಹೇಳುತ್ತಿದ್ದೇನೆ" ಎಂದರು. ಶಸ್ತ್ರ, ತಂತ್ರ, ಯುದ್ಧ ಇಲ್ಲದೇ ಬಗೆಹರಿಯುವುದೇ ಎಂದಾಗ, "ಇದು ರಾಜಕಾರಣ. ಇಲ್ಲಿ ಶಸ್ತ್ರ ಶಾಸಕರು ದೆಹಲಿಗೆ ತೆರಳಿ ನಾಯಕತ್ವ ಬದಲಾವಣೆ ವಿಚಾರವಾಗಿ ಹೈಕಮಾಂಡ್ ನಾಯಕರನ್ನು ಕೇಳುವ ಬಗ್ಗೆ ಪ್ರಶ್ನಿಸಿದಾಗ, "ಶಾಸಕರು ದೆಹಲಿಗೆ ಹೋಗುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಶಾಸಕರನ್ನೇ ಕೇಳಿ" ಎಂದರು. ಭೋಜನಕೂಟ ಸೇರಿದ ಶಾಸಕರು ನಾಯಕತ್ವದ ವಿಚಾರದಲ್ಲಿ ಸ್ಪಷ್ಟನೆ ಕೇಳಿದ್ದಾರೆ ಎಂದಾಗ, "ನಾನು ಊರಲ್ಲಿ ಇರಲಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ, ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ. ಪಕ್ಷ ಅದನ್ನು ಗಮನಿಸಲಿದೆ" ಎಂದು ತಿಳಿಸಿದರು. ಹೀಗೆ ಆದರೆ 2028ರ ಚುನಾವಣೆ ಪಕ್ಷಕ್ಕೆ ಕಷ್ಟವಾಗಲಿದೆ ಎಂದಾಗ, "ಚುನಾವಣೆಗೆ ಸ್ಪರ್ಧಿಸುವವರಿಗೆ ಕಷ್ಟವಾಗಬಹುದು. ನನಗೆ ಕಷ್ಟ ಆಗುವುದಿಲ್ಲ. ಈ ಬಗ್ಗೆ ನಾನೇಗೆ ಹೇಳಲಿ" ಎಂದು ತಿಳಿಸಿದರು. ಶಾಸಕರ ಆಗ್ರಹದಲ್ಲಿ ನ್ಯಾಯ ಇದೆ ಅಲ್ಲವೇ ಎಂದು ಕೇಳಿದಾಗ, "ಶಾಸಕರ ವಿಚಾರಧಾರೆ ಅವ–ರಿಗೆ ಹಾಗೂ ಸಂಬಂಧಿಸಿದ್ದೇ ಹೊರತು, ನನಗಲ್ಲ. ಪಕ್ಷ ಅವರ ವಿಚಾರಗಳನ್ನು ಗಮನಿಸಲಿದೆ. ನಾವು ಆ ವಿಚಾರದಲ್ಲಿ ಹೇಳಲು ಬರುವುದಿಲ್ಲ" ಎಂದರು. ಶಿವಕುಮಾರ್ ಅವರು ಪಕ್ಷ ನನ್ನನ್ನು ಗಮನಿಸಲಿದೆ ಎಂದು ಹೇಳುತ್ತಲೇ ಇದ್ದಾರೆ ಎಂದಾಗ, "ಎಲ್ಲದಕ್ಕೂ ತಾಳ್ಮೆ ಇರಲಿ" ಎಂದರು. ಸಿದ್ದರಾಮಯ್ಯ ಅವರನ್ನು ಬದಲಿಸುವುದಾದರೆ ದಲಿತ ಸಿಎಂ ಮಾಡಬೇಕು ಎಂಬ ಹೆಚ್.ಸಿ ಮಹದೇವಪ್ಪ ಅವರ ಹೇಳಿಕೆ ಬಗ್ಗೆ ಕೇಳಿದಾಗ, "ಎಲ್ಲರಿಗೂ ಆಸೆ ಇದೆ. ಇದರಲ್ಲಿ ತಪ್ಪೇನಿಲ್ಲ" ಎಂದರು. ನಿಮ್ಮ ಸಹೋದರರನ್ನು ಸಿಎಂ ಹುದ್ದೆಯಲ್ಲಿ ಕೂರಿಸಲು ನಿಮ್ಮ ಪ್ರಯತ್ನ ಹೇಗಿದೆ, ನಿಮ್ಮ ಬಳಿ ಶಾಸಕರ ಸಂಖ್ಯೆ ಹೆಚ್ಚಾಗಿದೆಯೇ ಎಂದು ಕೇಳಿದಾಗ, "ನನಗೆ ಆ ಬಗ್ಗೆ ಗೊತ್ತಿಲ್ಲ. ಶಾಸಕರ ವಿಚಾರ ಬಿಟ್ಟು ಬಮೂಲ್ ವಿಚಾರ ಏನಾದರೂ ಇದ್ದರೆ ಕೇಳಿ, ಪ್ರತಿಕ್ರಿಯೆ ನೀಡುವೆ' ಎಂದರು.

# ಶ್ರೀನಿವಾಸ ಕ್ಯಾಂಪ್ ಸರ್ಕಾರಿ ಶಾಲೆಯಲ್ಲಿ ಎಸ್.ಡಿ.ಎಂ.ಸಿ ರಚನೆ ಅಧ್ಯಕ್ಷ ಉಪಾಧ್ಯಕ್ಷ ಸದಸ್ಯರ ಆಯ್ಕೆ




ನೈಜ್ಯ ದೇಸೆ ನ್ಯೂಸ್

**ತಾಲೂಕಿನ ಶ್ರೀನಿವಾಸ ಕ್ಯಾಂಪಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಎಸ್.ಡಿ.ಎಂ.ಸಿ ರಚನೆ ಮಾಡಲಾಯಿತು ರಚನಾ ಸಭೆಯಲ್ಲಿ ಸಿ.ಆರ್.ಸಿ ಸಂಪನ್ಮೂಲ ವ್ಯಕ್ತಿಗಳಾದ ರಾಜೇಸಾಬ್ ಹಾಗೂ ಗುರುರಾಜ್ ದೇಸಾಯಿ ಆಗಮಿಸಿ, ಎಸ್.ಡಿ.ಎಂ.ಸಿಯ ಕರ್ತವ್ಯಗಳು ಜವಾಬ್ದಾರಿಗಳನ್ನ ವಿವರಿಸಿದರು.**

ಎಲ್ಲ ಸದಸ್ಯರು, ಪೋಷಕರು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಹುಚ್ಚಾರೆಡ್ಡಿ ಬಾಗಲವಾಡ, ಹಾಗೂ ಉಪಾಧ್ಯಕ್ಷರನ್ನಾಗಿ ವಿಜಯಲಕ್ಷ್ಮೀ ಅಯ್ಯಪ್ಪ ನಾಯಕ ಕೂಡ್ಲೂರು, ಮತ್ತು ಸದಸ್ಯರನ್ನಾಗಿ ಬಸವರಾಜ, ಅಮರೇಶ ಮಾನೇಗಾರ, ಜಯಶ್ರೀ ದುರುಗಪ್ಪ ಲಿಂಗಸುಗೂರು, ನಿಂಗಪ್ಪ ಪನ್ನೂರು, ಲಕ್ಕಪ್ಪ ಕೋಟೆಗುಡ್ಡ, ತಾಯಮ್ಮ ಹನುಮಂತಪ್ಪ, ರೇಣುಕಮ್ಮ ನಾಗರಾಜ ಚಿರತನಾಳ, ಜಮುನಕ್ಕ ಹೇಮಣ್ಣ, ಮಲ್ಲಿಕಾರ್ಜುನ ಪೂಜಾರಿ, ಮಲ್ಲೇಶ ನಾಯಕ, ಹುಸೇನಬಿ ಚಾಂದ್ ಸಾಬ್, ರೇಣುಕಾ ಭೀರಪ್ಪ, ಹನುಮಂತಮ್ಮ ಸಿದ್ರಾಮೇಶ ಗುರಿಕಾರ, ಶರಣಪ್ಪ ಉಪ್ಪಾರ, ಬಾಷಾಸಾಬ್ ಶಫೀಯಾ ಬೇಗಂ, ನಬೀಸಾಬ್, ಆಯ್ಕೆ ಮಾಡಲಾಯಿತು.

ಮುಖ್ಯ ಗುರುಗಳಾದ ದುರುಗಪ್ಪ ಗುಡದೂರು ಸ್ವಾಗತಿಸಿದರು, ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರು ಗುರು ಹಿರಿಯರು ಮತ್ತು ಶಿಕ್ಷಕರಾದ ಯಮನೂರಪ್ಪ, ವೀರೇಶ, ಶ್ರೀದೇವಿ, ಅಂಗನವಾಡಿ ಕಾರ್ಯಕರ್ತೆಯರಾದ ಬಸಮ್ಮ, ಮದ್ಯಾನಮ್ಮ, ಹಾಗೂ ಮಕ್ಕಳು ಹಾಜರಿದ್ದರು. ಇದೇ ವೇಳೆ ನೂತನ ಅಧ್ಯಕ್ಷ–ರಿಗೆ ಉಪಾಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಸನ್ಮಾನಿಸಿ ಗೌರವಿಸಿ ಅಭಿನಂದಿಸಲಾಯಿತು.

# ಸಾಲಗುಂದ ಗ್ರಾಮದಲ್ಲಿ ಪ್ರೀಜ್ ಬ್ಲಾಸ್ಟ್ ಆಗಿ ಹೊತ್ತಿ ಉರಿದ ಮನೆ ಸುಟ್ಟು ಕರಕಲಾದ ಅಗತ್ಯ ವಸ್ತುಗಳು

ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಾಲಗುಂದ ಗ್ರಾಮದ 5ನೇ ವಾರ್ಡಿನಲ್ಲಿರುವ ಸುಭಾನ್ ಸಾಬ್ ತಂದೆ ರಾಜನಾಯಕ ಅವರ ಮನೆಯ ಪ್ರೀಜ್ ಏಕಾಏಕಿಯಾಗಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಬೆಂಕಿ ಹತ್ತಿಕೊಂಡು ಅಪಾರ ಪ್ರಮಾಣದ ಬಟ್ಟೆ, ಕಾಳು, ಭತ್ತ, ಜೋಳ, 2 ಲಕ್ಷ ರೂ. ಮೌಲ್ಯದ ಬಂಗಾರದ ಒಡವೆಗಳು ಸುಟ್ಟು ಕರಕಲಾಗಿವೆ ಎಂದು ತಿಳಿದು ಬಂದಿದೆ.**



ಮನೆಯ ಮಾಲಿಕ ಬೇರೆ ಊರಿಗೆ ತೆರಳಿದ್ದಾಗ ಇಂತಹ ಘಟನೆ ನಡೆದಿದೆ. ನಂತರ ಬೆಂಕಿ ಹತ್ತಿದ ವಿಷಯವನ್ನು ಪಕ್ಕದ ಮನೆಯವರು ತಿಳಿಸಿದ್ದಾರೆ, ನಾನು ಬೇರೆ ಊರಿಗೆ ಬಂದಿದ್ದೇನೆ, ನೀವು ಬೆಂಕಿಯನ್ನು ನಂದಿಸಲು ಪ್ರಯತ್ನಿಸಿ ಎಂದಿದ್ದಾರೆ. ಪಕ್ಕದ ಮನೆಯವರು ಮತ್ತು ಗ್ರಾಮಸ್ಥರು ಸೇರಿ ಮನೆಯಲ್ಲಿನ ಪ್ರೀಜ್ ಶಾರ್ಟ್ ಸರ್ಕ್ಯೂಟ್ ನಿಂದ ಬ್ಲಾಸ್ಟ್ ಆಗಿ ಬೆಂಕಿ ಹತ್ತಿಕೊಂಡು ಧಗ ಧಗ ಉರಿಯುತ್ತಿದ್ದ ಮನೆಯನ್ನು ನೀರು ಹಾಕಿ ಆರಿಸಲು ಪ್ರಯತ್ನ ಪಟ್ಟರು ಕೂಡ ಮನೆಯಲ್ಲಿದ್ದ ಅಗತ್ಯ ವಸ್ತುಗಳು ಸುಟ್ಟು ಕರಕಲಾಗಿವೆ ಎಂದು ತಿಳಿದು ಬಂದಿದೆ.

ವಿಷಯ ತಿಳಿದು ಸಂಬಂಧಪಟ್ಟ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದು ಪೋಟೋ ತೆಗೆದುಕೊಂಡು ಹೋಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದರು.

# ದ್ವಿತೀಯ ಪಿಯುಸಿ ಪರೀಕ್ಷೆ ಕನ್ನಡ ವಿಷಯ 3752 ವಿದ್ಯಾರ್ಥಿಗಳು ಹಾಜರಿ

ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಫೆ.28 ಶನಿವಾರದಿಂದ ಪ್ರಾರಂಭವಾದ ದ್ವಿತೀಯ ಪಿಯುಸಿ ಪರೀಕ್ಷೆಯ ಕನ್ನಡ ವಿಷಯ ಬರೆಯಲಿಕ್ಕೆ 3752 ವಿದ್ಯಾರ್ಥಿಗಳು ಹಾಜರಾಗಿದ್ದು, ಶಾಂತಿ ಮತ್ತು ಶಿಸ್ತಿನಿಂದ ಪರೀಕ್ಷೆ ನಡೆದಿದೆ. ಯಾವುದೇ ರೀತಿಯಲ್ಲಿ ಅಹಿತಕರ ಘಟನೆಗಳು, ಚೀಟಿ ಎಡವಟ್ಟುಗಳು ನಡೆಯದಂತೆ ನಿಗಾವಹಿಸಲು ಪೊಲೀಸರನ್ನು ನಿಯೋಜನೆ ಮಾಡಿ ಬಂದೋಬಸ್ತ್ ಒದಗಿಸಲಾಗಿತ್ತು.**

ಸಿಂಧನೂರು ತಾಲೂಕಿನಲ್ಲಿ ದ್ವಿತೀಯ ಪಿಯುಸಿಯ 9 ಪರೀಕ್ಷಾ ಕೇಂದ್ರಗಳಿದ್ದು, 4004



ವಿದ್ಯಾರ್ಥಿಗಳು ನೋಂದಣಿಯಾಗಿದ್ದು, ಅದರಲ್ಲಿ 252 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದಾರೆ. ಪ್ರತಿಯೊಂದು ಕೊಠಡಿಯಲ್ಲೂ ಕೂಡ ಸಿ.ಸಿ ಕ್ಯಾಮರಾಗಳನ್ನು ಆಳವಡಿಸಲಾಗಿದೆ. ವಿದ್ಯಾರ್ಥಿಗಳು ಎಲ್ಲವನ್ನೂ ಗಮನಿಸಿ ಸೂಕ್ಷ್ಮವಾಗಿ ಪರೀಕ್ಷೆ ಬರೆದರು.

# ಕೊಳಕೂರು ಗ್ರಾಮ ಪಂಚಾಯತ್ ಮುಂದೆ 3,ದಿನಗಳಿಂದ ಹಗಲು ರಾತ್ರಿ ಧರಣೆ ಸತ್ಯಾಗ್ರಹ

ನೈಜ್ಯ ದೇಸೆ ನ್ಯೂಸ್

**ಜೇವರ್ಗಿ: ಗ್ರಾಮ ಪಂಚಾಯತಿ ಕಚೇರಿ ಮುಂದೆ ಅಡುಗೆ ಮಾಡಿ ಊಟದ ವ್ಯವಸ್ಥೆ ಮಾಡುತ್ತಾ ಕೊಳಕೂರು ಗ್ರಾಮ ಪಂಚಾಯತ್ ಕಚೇರಿ ಮುಂದೆ 3,ದಿನಗಳಿಂದ ಹಗಲು ರಾತ್ರಿ ಧರಣಿ ಸತ್ಯಾಗ್ರಹವನ್ನು ಕರ್ನಾಟಕ ಪ್ರಾಂತ ರೈತ ಸಂಘ ಕೊಳಕೂರು ಗ್ರಾಮ ಘಟಕದಿಂದ ಈ ಹೋರಾಟ ಹಮ್ಮಿಕೊಳ್ಳಲಾಗಿದೆ.**

ಪ್ರಮುಖ ಬೇಡಿಕೆಗಳಾದ ನಿರಂತರ ವಾಗಿ ಉದ್ಯೋಗ ಖಾತ್ರಿಯಲ್ಲಿ ಕೆಲಸ ಕೊಡಬೇಕೆಂದು, ಒತ್ತಾಯಿಸಿ ಹಾಗೂ ಇತ್ತೀಚೆಗೆ ಕೇಂದ್ರ ಸರ್ಕಾರ, 2005,ರ ಉದ್ಯೋಗ ಖಾತ್ರಿ ಕಾಯ್ದೆಯನ್ನು ಮಾರ್ಪಾಡು ಮಾಡಿ ತಾಂತ್ರಿಕ ಸಮಸ್ಯೆಗಳನ್ನು ಸೃಷ್ಟಿ ಮಾಡಿ ಸಾಮೂಹಿಕ ಕೃಷಿ ಕೂಲಿ ಕಾರ್ಮಿಕ ಜನರಿಗೆ ಕೆಲಸ ಸಿಗದಂತೆ ಬದಲಾವಣೆ ಮಾಡಿ, ಬಿ, ವಿ, ಜಿ, ರಾಮಜಿ, ಎಂದು ಹೆಸ–ರಿಟ್ಟಿರುವುದನ್ನು ವಿರೋಧಿಸಿ ಮತ್ತು ರದ್ದು ಪಡಿಸುವಂತೆ




2005ನೇ ಸಾಲಿನಲ್ಲಿ ಬಿಟ್ಟುಬಿಡದೆ ಅತಿಯಾಗಿ ಮಳೆ ಬಂದಿರುವುದರಿಂದ ಎಲ್ಲಾ ಬೆಳೆಗಳು ಸಂಪೂರ್ಣ ಹಾಳಾಗಿ ಹೋಗಿರುತ್ತವೆ. ಬೆಳೆಯ ಪರಿಹಾರ ದನದ ಹಣವನ್ನು ಕೆಲವೊಂದಿಷ್ಟು ರೈತರಿಗೆ ಕೊಟ್ಟು, ಇನ್ನು ಉಳಿದ ಬಹಳಷ್ಟು ರೈತ–ರಿಗೆ ಪರಿಹಾರ ಧನ ವಿತರಿಸದೆ ಬಾರಿ ಮೋಸ ಮಾಡಿದೆ ಆದ್ದರಿಂದ ಉಳಿದ ರೈತರಿಗೆ ಎಕರೆಗೆ ,25000,ಸಾವಿರ ರೂಪರಿಹಾರ ಪರಿಹಾರದ ಹಣ ಕೊಡುವಂತೆ ,ವಿಮೀಹಣ ಬಿಡುಗಡೆಗಾಗಿ, 2005,ರ ಉದ್ಯೋಗ ಖಾತ್ರಿ, ಬಲಪಡಿಸಬೇಕು ಒಂದು ವರ್ಷದಲ್ಲಿ250, ಕೆಲಸದ ದಿನಗಳು ಹೆಚ್ಚಳಾಗಬೇಕು ಒಂದು ದಿನದ ಕೂಲಿ ಹಣ700ರೂ, ಹೆಚ್ಚಳಾಗಬೇಕು ಸ್ಥಳೀಯ ಬೇಡಿಕೆಗಳಾದ ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಮಾಡಬೇಕು ಕುಡಿವ ನೀರಿನ ವ್ಯವಸ್ಥೆ ಸ್ವಚ್ಛತಾ ಕ್ರಮ ಕೈಗೊಳ್ಳಬೇಕು ಗ್ರಾಮೀಣ ಪ್ರದೇಶಗಳ ಹಾಳಾದ ರಸ್ತೆಗಳು ಸುಧಾರಣೆಗಾಗಿ ಇನ್ನಿತರ ಬೇಡಿಕೆಗಳಿಗಾಗಿ ಹೋರಾಟ ಹಮ್ಮಿಕೊಳ್ಳಲಾಗಿದೆ.

ಈ ಜನಪರ ಹೋರಾಟದ ಬೇಡಿಕೆಗಳಿಗಾಗಿ ಜಿಲ್ಲಾ ಪಂಚಾಯತ್ನ ಅಧಿಕಾರಿಗಳು ಆಗ ಲಿ ಹಾಗೂ ತಾಲೂಕು ಪಂಚಾಯತ್ ನ ಅಧಿಕಾರಿಗಳಾಗಲಿ ಯಾವ ಅಧಿಕಾರಿಗಳು ಸ್ಪಂದನೆ ಮಾಡುತ್ತಿಲ್ಲ ಹಾಗೂ ತಾಲೂಕಿನ ಶಾಸಕರಾದ ಅಜಯ ಸಿಂಗ ಇವರು ಹಾಗೂ ಇನ್ನುಳಿದ ಎಲ್ಲ ರಾಜಕೀಯ ಪಕ್ಷದ ಮುಖಂಡರು ಈ ಹೋರಾಟಕ್ಕೆ ಸ್ಪಂದನೆ ಮಾಡುತ್ತಿಲ್ಲ ನಿರ್ಲಕ್ಷತನದಿಂದ ಅಲಾಕ್ಷತನದಿಂದ ಮುಗ್ಧ ಬಡ ರೈತ ಕಾರ್ಮಿಕರ ಜೊತೆ ಚೆಲ್ಲಾಟ ಆಡುತ್ತಿದ್ದಾರೆ.

ಮುಂದಿನ ದಿನಗಳಲ್ಲಿ ಹೋರಾಟ ಬಲಗೊಳಿಸಿ ಬೇಡಿಕೆಗಳು ಈಡೇರಿಸಿಕೊಳ್ಳುತ್ತೇವೆ ಎಂದು ಈ ಪತ್ರಿಕಾಗೋಷಣೆ ಮೂಲಕ ಸರಕಾರಕ್ಕೆ ಕೋರುತ್ತೇವೆ ಈ ಹೋರಾಟದಲ್ಲಿ ಭಾಗವಹಿಸಿರುವ ಪ್ರಮುಖರು ಸುಭಾಷ್ ಹೊಸಮನೆ ಬಸವರಾಜ ನಡುವಿನಕೆರೆ ಸಿದ್ದಣ್ಣ ಹಂಗರಗಿ ನಿಂಗಣ್ಣ ಆಡಿನ ಶ್ರೀನಾಥ್ ಮಡಿವಾಳ ಕಾರ್ ಲಕ್ಷ್ಮಣ್ ಪರ್ಸಗೊಂಡ ಸಿದ್ದು ದೊಡ್ಡಮನಿ ಮಹಿಳಾ ಮುಖಂಡರು ಬೋರಮ್ಮ ತೆಳಗೋಳು ನಾಗಮ್ಮ ದೊಡ್ಡಮನಿ ಬಸ್ಸಮ್ಮ ಯಾದವ್ ಸವಿತಾ ಸಂಕೇಶ್ವರ ಇನ್ನೂ ನೂರಾರು ಮಹಿಳೆಯರು ಪುರುಷರು ಈ ಹೋರಾಟದಲ್ಲಿ ಭಾಗವಹಿಸಿದರು

## ಸಾಹಿತ್ಯ ಸಿಂಚನ

ಸಹೋದರತ್ವ

ರಕ್ತದ ಬಂಧವೇ ಸಹೋದರತ್ವವಲ್ಲ,
ಹೃದಯಗಳ ಸೇತುವೆಯೇ ನಿಜವಾದ ಸಂಬಂಧ.

ಕೈ ಹಿಡಿದು ನಿಲ್ಲಿಸುವ ಕ್ಷಣದಲ್ಲೇ,
ಮಾನವೀಯತೆ ಮೂಡುತ್ತದೆ ಬಂಧ.

ಬೇದಗಳ ಬಣ್ಣಗಳು ಸಾವಿರವಾದರೂ,
ಮನದ ಬಣ್ಣ ಒಂದೇ ಆಗಲಿ.

ನಾವು–ನೀವು ಎನ್ನುವ ಗೋಡೆಗಳು ಕುಸಿದು,
ಒಗ್ಗಟ್ಟಿನ ಮನೆ ಕಟ್ಟಲಿ.

ದುಃಖದ ನೆರಳಲ್ಲಿ ನೆರವಾಗುವ ಕೈ,
ಸಂತೋಷದ ಹೊತ್ತಿನಲ್ಲಿ ಹಂಚುವ ನಗು.

ಅದೇ ಸಹೋದರತ್ವದ ಸುಗಂಧ,
ಅದೇ ಬದುಕಿನ ಸತ್ಯದ ಬೆಳಗು.

ಜಾತಿ–ಮತಗಳ ಮೀರಿದ ದಾರಿ,
ಪ್ರೀತಿ–ವಿಶ್ವಾಸಗಳ ಹಾದಿ.

ಒಬ್ಬರಿಗೊಬ್ಬರು ಬೆಂಬಲವಾದಾಗ,
ಭೂಮಿ ೧ಣಜಟಜಿ ಛಜಛಿಕಿಟಛ ಚಿ ಸ್ವರ್ಗವಾದಿ.

ಬನ್ನಿ, ಕೈ ಕೈ ಹಿಡಿದು ಸಾಗೋಣ,
ಸಹೋದರತ್ವದ ದೀಪ ಹಚ್ಚೋಣ.

ಮಾನವೀಯತೆಯ ಹಾದಿಯಲ್ಲಿ ನಡೆದು,
ಹೊಸ ಲೋಕವೊಂದು ಕಟ್ಟೋಣ.

**ಅಮರೇಶ್**

## ಮಾಡಶಿರವಾರ ಗ್ರಾಮದಲ್ಲಿ ಅಕ್ರಮ ಮಧ್ಯ ಮಾರಾಟ ವಿರೋಧಿಸಿ ಮಹಿಳೆಯರಿಂದ ತಹಶೀಲ್ದಾರರಿಗೆ ಆಗ್ರಹ

# ಸರಾಯಿ ಬೇಡ ಶಿಕ್ಷಣ ಬೇಕು. ಬೀರು ಬೇಡ ನೀರುಬೇಕು ಕೂಗು

❑ ನೈಜ್ಯ ದೆಸೆ ನ್ಯೂಸ್





**ಸಿಂಧನೂರು: ತಾಲೂಕಿನ ಮಾಡಶಿರವಾರ ಗ್ರಾಮದಲ್ಲಿ ಅಕ್ರಮವಾಗಿ ಮಧ್ಯ ಮಾರಾಟವನ್ನು ತಡೆಯುವಂತೆ ಒತ್ತಾಯಿಸಿ ಗ್ರಾಮದ ನೂರಾರು ಮಹಿಳೆಯರು ಮತ್ತು ಯುವಕರ ಜೊತೆಗೆ ಕೆ ಆರ್ ಎಸ್ ಪಕ್ಷದ ಮುಖಂಡರು ತೆರಳಿ ಮಾನ್ಯ ತಹಶೀಲ್ದಾರರು,ಅಬಕಾರಿ ನಿರೀಕ್ಷಕರು,ಹಾಗೂ ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾ–ರಿಗಳಿಗೆ ಮಾಡಶಿರವಾರ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ನಿಷೇಧಿಸುವಂತೆ ತಹಶೀಲ್ದಾರರಿಗೆ ಆಗ್ರಹ ಮಾಡಿದರು.**

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಕೆ ಆರ್ ಎಸ್ ಪಕ್ಷದ ಮುಖಂಡ ನಿರುಪಾದಿ ಕೆ ಗೋಮರ್ಸಿ ಗ್ರಾಮದಲ್ಲಿ ಕೆಲವು ವ್ಯಕ್ತಿಗಳು ಯಾವುದೇ ಪರವಾನಿಗೆ ಇಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ವಸತಿ ಪ್ರದೇಶಗಳ ಸಮೀಪ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ.ಇದರ ಪರಿಣಾಮವಾಗಿ ಊರಿನ ಯುವಕರು,ಕಾರ್ಮಿಕ ವರ್ಗದವರು, ರೈತಪಿ ಕೂಲಿಕಾರರು ದಿನ ನಿತ್ಯ ಮಧ್ಯ ಸೇವಿಸುವಂತಾಗುತ್ತಿದ್ದು ಇದ–ರಿಂದ ಕುಟುಂಬದಲ್ಲಿ ಕಲಹ, ಸಾರ್ವಜನಿಕ ಅಶಾಂತಿ ಹಾಗೂ ಕಾನೂನು ವ್ಯವಸ್ಥೆಗೆ ಗ್ರಾಮದಲ್ಲಿ ಬಂಗ ಉಂಟಾಗುತ್ತಿದೆ. ವಿಶೇಷವಾಗಿ ಮಹಿಳೆಯರು,ಮಕ್ಕಳು ಮತ್ತು ವೃದ್ಧರಿಗೆ ತೊಂದರೆಯಾಗುತ್ತಿದ್ದು ಇದ–ರಿಂದ ಗ್ರಾಮದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಗ್ರಾಮದಲ್ಲಿನ ಈ ಅಕ್ರಮ ಮಧ್ಯ ಮಾರಾಟವು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿದ್ದು ಸಮಾಜಕ್ಕೆ ಗಂಭೀರ ಹಾನಿ ಉಂಟು ಮಾಡುತ್ತಿದೆ ಗ್ರಾಮದ ಹಲವು ಅಂಗಡಿ ಮುಂಗಟಗಳಲ್ಲಿ,ಕಿರಾಣಿ ಅಂಗಡಿಯಗಳಲ್ಲಿ,ಮನೆಗಳಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡಲಾಗುತ್ತಿದ್ದು ಇದರ ಪರಿಣಾಮ ಮಧ್ಯವು ಗ್ರಾಮಸ್ಥರಿಗೆ ಸುಲಭವಾಗಿ ದೊರೆಯುವಂತಾಗುತ್ತಿದೆ, ಆದ್ದರಿಂದ ದಯವಿಟ್ಟು ಸಂಬಂಧಿಸಿದ ಸ್ಥಳಗಳಲ್ಲಿ ತಕ್ಷಣ ದಾಳಿ ನಡೆಸಿ ಅಕ್ರಮ ಮಧ್ಯ ಮಾರಾಟ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಅವರನ್ನ ಶಿಕ್ಷೆಗೆ ಒಳಪಡಿಸಿ ಸಾರಾಯಿ ಮುಕ್ತ ಮಾಡಶಿರವಾರ ಗ್ರಾಮವನ್ನಾಗಿ ನಿರ್ಮಾಣ ಮಾಡಬೇಕೆಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಸಮಾಜಿ–ಕ ಹೋರಾಟಗಾರರಾದ ವಿರುಪಮ್ಮ ಉದ್ಬಳ, ಬಸವರಾಜ ಗೋಡಿಹಾಳ, ಮದ್ಯ ನಿಷೇಧ ಆಂದೋಲನದ ಸಂಚಾಲಕರಾದ ಮೋಕ್ಷಮ್ಮ, ಮರಿಯಮ್ಮ, ಇಂದಿರಮ್ಮ, ಶಿವಮ್ಮ, ಈರಮ್ಮ, ವಿಜಯಲಕ್ಷ್ಮಿ, ಯಂಕಮ್ಮ–ಅಂಬಮ್ಮ,ಸಾವಿತ್ರಮ್ಮ,ಯಮನಮ್ಮಗ್ರಾಮದ ಮುಖಂಡರಾದ ವೀರೇಶ,ಜಗದೀಶ್,ಶಿವರಾಜ್, ನಾಗರಾಜ್, ಬಾಳಪ್ಪ,ರಾಮಣ್ಣ,ಸೇ–ರಿದಂತೆ ಅನೇಕರು ಭಾಗವಹಿಸಿದ್ದರು

# ನಾವದಗಿ ಶ್ರೀಗಳ ಧರ್ಮ ಸೇವೆ ಶ್ಲಾಘನೀಯ: ಶಿವಲಿಂಗ ಶರಣರು



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪುರಾಣ ಪ್ರವಚನಗಳ ಮೂಲಕ ಮಹಾತ್ಮರ ಶರಣ ಸಂತರ ಜೀವನ ಚ–ರಿತ್ರೆಯನ್ನು ಆಲಿಸಿದರೆ ಸಾಲದು ಆಲಿಸಿದ್ದನ್ನು ಜೀವನದಲ್ಲಿ ಪಾಲಿಸುವ ಅಗತ್ಯ ಇದೆ ಎಂದು ಶಹಾಪೂರ ತಾಲೂಕಿನ ಹೋತಪೇಟೆ ಕೈಲಾಸ ಆಶ್ರಮದ ಪೂಜ್ಯ ಶಿವಲಿಂಗ ಶರಣರು ಹೇಳಿದರು.**

ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಪೂಜ್ಯ ಷ.ಬ್ರ. ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವ ನಿಮಿತ್ಯವಾಗಿ ಹಮ್ಮಿಕೊಂಡ ಗುಡ್ಡಾಪುರದ ದಾನಮ್ಮ ದೇವಿ ಪುರಾಣದ 17 ನೇ ದಿನದ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶ್ರೀಮಠದ ಪರಮ ಪೂಜ್ಯರು ಈ ಭಾಗದಲ್ಲಿ ಧರ್ಮ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತಿದ್ದಾರೆ ಅವರಿಗೆ ನೀವೆಲ್ಲರೂ ತನು–ಮನ ಧನದಿಂದ ಸಹಕಾರ ನೀಡಿ ಎಂದರು.

ನಾವದಗಿಯ ಪೂಜ್ಯ ಷ.ಬ್ರ. ಶ್ರೀ ರಾಜ ಗುರುರಾಜೇಂದ್ರ ಒಡೆಯರ್ ಶಿವಾಚಾರ್ಯರು ಸಮ್ಮುಖ ವಹಿಸಿ ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಪ್ರಸಾದ ಸೇವೆ ಗೈದ ತಾಳಿಕೋಟಿ ಪಟ್ಟಣದ ವಿಕೆಎಚ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಸಮಾಜ ಸೇವಕ ಪ್ರಹ್ಲಾದಸಿಂಗ್ ಹಜೇರಿ ಇವರನ್ನು ನಾವದಗಿ ಶ್ರೀಗಳು ಶ್ರೀಮಠದ ವತಿಯಿಂದ ಸನ್ಮಾನಿಸಿ ಆಶೀರ್ವಾದ ನೀಡಿದರು. ಕಾರ್ಯಕ್ರಮದಲ್ಲಿ ವೇ.ಮೂ.ಗುರಯ್ಯ ಶಾಸ್ತ್ರಿಗಳು, ಪ್ರಭುಲಿಂಗಯ್ಯ ಹಿರೇಮಠ, ಸಾಹಿತಿ ಬಸವರಾಜ ಗೊರಜಿ,ವಿಠಲ್ ಹಜೇರಿ, ಗ್ರಾಮದ ಗಣ್ಯರು ಹಿರಿಯರು ಹಾಗೂ ಮಹಿಳೆಯರು ಇದ್ದರು.

## ನಾವದಗಿ ಶ್ರೀಗಳಿಗೆ ಗೌರವ ಸಮರ್ಪಣೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಷ.ಬ್ರ.ಶ್ರೀ ರಾಜ ಗುರುರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ನಡೆಸುತ್ತಿರುವ ಧರ್ಮ ಜಾಗೃತಿ ಕಾರ್ಯಗಳಿಗಾಗಿ ಅವರಿಗೆ ಗೌರವ ಸಮರ್ಪಣ ಸಲ್ಲಿಸಲಾಯಿತು.**



ಶ್ರೀಮಠದಲ್ಲಿ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ನಡೆಯುತ್ತಿರುವ ಗುಡ್ಡಾಪುರದ ಶ್ರೀ ದಾನಮ್ಮ ದೇವಿ ಪುರಾಣ ಕಾರ್ಯಕ್ರಮದ ಮುತ್ತೈದೆಯ–ರಿಗೆ ಉಡಿ ತುಂಬುವ ವಿಶೇಷ ಕಾರ್ಯಕ್ರಮದಲ್ಲಿ ಅವರಿಗೆ ಈ ಗೌರವ ಸಮರ್ಪಣೆಯನ್ನು ಕೊಂಡಗೂಳಿಯ ಪರಮ ಪೂಜ್ಯ ಶಂಕರಾನಂದ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ.ಪ್ರಭುಗೌಡ ಲಿಂಗದಳ್ಳಿ,ಡಾ.ಸೋಮಶೇಖರಯ್ಯ ಹಿರೇಮಠ,ಸಾಹಿತಿ ಬಸವರಾಜ ಗೊರಜಿ, ಮಾತೋಶ್ರೀ ರೇಣುಕಾ ಹಾಗೂ ಶೋಭಾ ಅಮ್ಮನವರು,ಡಾ.ಎಸ್.ಎಸ್.ದೇಸಾಯಿ,ಸುರೇಶ ದಿನ್ನಿಬಾಯಿ, ಪುರಾಣಿಕ ರಾಚಯ್ಯ ಹಿರೇಮಠ,ಗ್ರಾಮದ ಗಣ್ಯರು ಹಿರಿಯರು ಹಾಗೂ ಮಹಿಳೆಯರು ಇದ್ದರು.

**ನೈಜ್ಯ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

# ಪಿಡಿಓ ಸಂಘದ ತಾಲೂಕಾ ಘಟಕದ ರಚನೆ

❑ ನೈಜ್ಯ ದೆಸೆ ನ್ಯೂಸ್



**ತಾಳಿಕೋಟಿ: ಪಟ್ಟಣದ ತಾ.ಪಂ ಸಭಾ ಭವನದಲ್ಲಿ ಬಸವನಗೌಡ ಚೌದ್ರಿ ಜಿಲ್ಲಾಧ್ಯಕ್ಷರು ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾ–ರಿಗಳ ಹುದ್ದೆ (ಬಿ–ಗ್ರೇಡ್ ) ಉನ್ನತೀಕರಣ ಸಂಘ(ರಿ) ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಾಳಿಕೋಟಿ ತಾಲೂಕ ಘಟಕವನ್ನು ಇತ್ತೀಚೆಗೆ ರಚನೆ ಮಾಡಲಾಯಿತು.**

ಈ ಸಭೆಯಲ್ಲಿ ತಾಲೂಕಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಸುರೇಶ ದಳವಾಯಿ,ಪ್ರಭು ಚನ್ನೂರ್, ಈರಣ್ಣ ಬಡಿಗೇರ್, ಧೂಳಪ್ಪ ಅಂಜುಟಗಿ, ಅನಿಲ್ ಬಿರಾದಾರ, ಸುಜಾತಾ ಯಡ್ರಾಮಿ, ಸಾವಿತ್ರಿ ಬಿರಾದಾರ, ರಾಜಶ್ರೀ ದೇವೂರ, ಶ್ರೀದೇವಿ ಗುಂಡಾಪುರ, ಕಾರ್ಯದರ್ಶಿಗಳು, ಸಂಘದ ಅಧ್ಯಕ್ಷರಾದ ಪಟೇಲ ಬಿರಾದಾರ, ಹಣಮಂತ್ರಾಯ ಜಿ ಚೌದ್ರಿ, ಪರಶುರಾಮ ಕರಾಟೆ, ಶಿವಸಂಗಪ್ಪ ಬಿರಾದಾರ ಹಾಗೂ ತಾಲೂಕ ಪಂಚಾಯತಿಯ ಸಿಬ್ಬಂದಿಯವರು ಭಾಗವಹಿಸಿದ್ದರು.

ಸಭೆಯಲ್ಲಿ ಪ್ರಭು ಚನ್ನೂರ ಅವರನ್ನು ಕರ್ನಾಟಕ ರಾಜ್ಯ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಹುದ್ದೆ(ಬಿ–ಗ್ರೇಡ್) ಉನ್ನತೀಕರಣ ಸಂಘ (ರಿ)ದ ತಾಳಿಕೋಟಿ ತಾಲೂಕ ಘಟಕದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಈರಣ್ಣ ಬಡಿಗೇರ ಅವರನ್ನು, ತಾಲೂಕಿನ ಸಂಘಟನಾ ಕಾರ್ಯದರ್ಶಿಗಳಾಗಿ ಅನಿಲ್ ಬಿರಾದಾರ ಹಾಗೂ ಧೂಳಪ್ಪ ಅಂಜುಟಗಿ ಮತ್ತು ಮಹಿಳಾ ಸಂಘಟನಾ ಕಾರ್ಯದರ್ಶಿಗಳಾಗಿ ಸಾವಿತ್ರಿ ಬಿರಾದಾರ,ಶ್ರೀದೇವಿ ಗುಂಡಾಪುರ ಹಾಗೂ ಕಾನೂನು ಸಲಹೆಗಾರರಾಗಿ ಸುಜಾತಾ ಯಡ್ರಾಮಿ ಅವರನ್ನು ಆಯ್ಕೆಮಾಡಲಾಯಿತು.

# ಭೋವಿ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ 300 ಕೋಟಿ ಮೀಸಲಿಗೆ ಒತ್ತಾಯ




❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ರಾಜ್ಯ ಸರ್ಕಾರ ಬಜೆಟ್‌ನಲ್ಲಿ 300 ಕೋಟಿ ಭೋವಿ ಅಭಿವೃದ್ಧಿ ನಿಗಮಕ್ಕೆ ಮೀಸಲಿಡಬೇಕೆಂದು ಅಖಿಲ ಕರ್ನಾಟಕ ಸಿದ್ಧರಾಮೇಶ್ವರ ಭೋವಿ (ವಡ್ಡರ) ಸಂಘಟನೆ ಜಿಲ್ಲಾಧ್ಯಕ್ಷ ರವಿಕುಮಾರ ಚಿಗರಿ ಒತ್ತಾಯಿಸಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದವರು, ಅಭಿವೃದ್ಧಿ ನಿಗಮದಲ್ಲಿ ಈಗಾಗಲೇ ಸರ್ಕಾರ ಸೌಲಭ್ಯಗಳನ್ನು ಪಡೆದವರು ಮತ್ತೆ ಫಲಾನುಭವಿಗಳಾಗಿ ಆಯ್ಕೆಯಾಗಿದ್ದಾರೆ. ಆದ–'ರಿಂದ ವಿವಿಧ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳ ದಾಖಲೆಗಳನ್ನು ಮರು ಪರಿಶೀಲಿಸಬೇಕೆಂದು ಒತ್ತಾಯಿಸಿದರು. ನಿಗಮದಿಂದ ದೊರೆಯುವಂತಹ ಸರಕಾರದ ಸೌಲಭ್ಯಗಳ ಬಗ್ಗೆ ಸಮಾಜದವ–ರಿಗೆ ಕಾರ್ಯಗಾರಗಳನ್ನು ಹಮ್ಮಿಕೊಂಡಾಗ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯ ದೊರೆಯುತ್ತದೆ. ಅನ್ಯ ಜಾತಿಯವರು ಭೋವಿ ಮತ್ತು ವಡ್ಡರ ಎಂದು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ನಿಗಮದಿಂದ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

ನಿಗಮದ ಅಧಿಕಾರಿಗಳು ತನಿಖೆ ನಡೆಸಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿದರು. ತಾಲೂಕಿನಲ್ಲಿ ಭೋವಿ ಜನಾಂದವರು ಮೊದಲಿನಿಂದಲೂ ಕಲ್ಲು ಬಂಡೆಗಳನ್ನು ಹೊಡೆಯುವ ಕುಲ ಕಸುಬು ನಡೆಸಿಕೊಂಡು ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಭೋವಿ ಸಮಾಜದವರಿಗೆ ಗುಡ್ಡ ಗಾಡು ಪ್ರದೇಶದಲ್ಲಿ ಕಲ್ಲು, ಬಂಡೆಗಳನ್ನು ಹೊಡೆಯಲು ಅನುಮತಿ ನೀಡಬೇಕು.

ಜತೆಗೆ ಭೋವಿ ಅಭಿವೃದ್ಧಿ ನಿಗಮದ ಬದಲಾಗಿ ಭೋವಿ ವಡ್ಡರ ಅಭಿವೃದ್ಧಿ ನಿಗಮವೆಂದು ಮರು ನಾಮಕರಣ ಮಾಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ವೀರೇಶ ಆನೆಹೊಸುರು, ಮಲ್ಲಯ್ಯ ನಾಗರಾಳ, ರಂಗಪ್ಪ ಅರಕೇರಿ, ತಿಮ್ಮಣ್ಣ ಗುಡಸಿಲಿ, ಹನುಮಂತ ನಾಗರಾಳ, ಮಲ್ಲಪ್ಪ ಮೆದಿಕಿನಾಳ, ನಾಗರಾಜ ಸೇರಿದಂತೆ ಇನ್ನಿತರರಿದ್ದರು.

# ಮನೆ–ಮನೆಯ ಕಥೆ ಬಿಚ್ಚಿಟ್ಟ "ಕಾಲಚಕ್ರ' ನಾಟಕ ವೃದ್ಧರ ಸಂಧ್ಯಾಕಾಲದ ಕಷ್ಟದ ಬದುಕು ಅನಾವರಣ

❑ ನೈಜ್ಯ ದೆಸೆ ನ್ಯೂಸ್



**ಕಲಬುರಗಿ: ಮರಾಠಿ ರಂಗಭೂಮಿಯ ಖ್ಯಾತ ನಾಟಕಕಾರ ಜಯವಂತ ದಳ್ವಿ ಅವರು ರಚಿಸಿದ. ಎಚ್.ಕೆ.ಕರ್ಕೇರ ಅವರು ಕನ್ನಡಕ್ಕೆ ಅನುವಾದಿಸಿದ "ಕಾಲಚಕ್ರ" ನಾಟಕವು ಕಲಬುರಗಿ ನಾಟಕೋತ್ಸವ ಅಂಗವಾಗಿ ಶುಕ್ರವಾರ ಇಲ್ಲಿನ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಪ್ರದರ್ಶನವಾಗಿದ್ದು, ವೃದ್ಧರ ಸಂಧ್ಯಾಕಾಲದ ಕಷ್ಟದ ಬದುಕು ಅನಾವರಣಗೊಳ್ಳುವ ಮೂಲಕ ಮನೆ–ಮನೆಯ ಕಥೆಯನ್ನು ಪ್ರತಿಬಿಂಬಿಸಿತು.**

ವೃದ್ಧ ದಂಪತಿಗಳು ಹಾಗೂ ಅವರ ಇಬ್ಬರ ಗಂಡು ಮಕ್ಕಳು. ಕಾಯಿಲೆಯಿಂದ ನರಳುತ್ತಿರುವ ತಾಯಿ, ತಂದೆಯರನ್ನ ಮಕ್ಕಳು ನಿರ್ಲಕ್ಷಿಸುತ್ತಾರೆ. ಇದನ್ನರಿತ ವೃದ್ಧ ತಂದೆ ಪತ್ರಿಕೆಯಲ್ಲಿ ಒಂದು ಪ್ರಕಟಣೆ ಕೊಡುತ್ತಾನೆ. "ಯಾ–ರಿಗೆ ಮಕ್ಕಳಿಲ್ಲವೊ ಅಂತವರು ಮಕ್ಕಳನ್ನು ದತ್ತು ತೆಗೆದು ಕೊಳ್ಳುತ್ತಾರೆ. ಹಾಗೆಯೇ ಯಾರಿಗೆ ತಂದೆ–ತಾಯಿ ಇಲ್ಲವೊ ಅಥವಾ ಅಜ್ಜ–ಅಜ್ಜಿ ಇಲ್ಲವೊ ಅಂತವರು ಯಾಕೆ ಈ ಮುದುಕರನ್ನು ದತ್ತು ತೆಗೆದುಕೊಳ್ಳಬಾರದು ಇಚ್ಛಿಸುವುದಾದರೆ. 70–75 ವಯಸ್ಸಿನ ಇಬ್ಬರು ವೃದ್ಧ ದಂಪತಿಗಳಿದ್ದಾರೆ. ಅವರನ್ನು ಕರೆದು ಕೊಂಡು ಹೋಗಿ" ಎಂದು ಪತ್ರಿಕೆಯಲ್ಲಿ ಜಾಹೀರಾತು ಕೊಡುತ್ತಾರೆ. ಇದನ್ನರಿತ ಮಕ್ಕಳಿಬ್ಬರು ವಯಸ್ಸಾದ ತಮ್ಮ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ. ಇದೇ ಹೊತ್ತಿಗೆ ಜಾಹೀರಾತು ಪ್ರಕಟಣೆಯನ್ನು ಓದಿದ ಒಬ್ಬ ಯುವಕ ವೃದ್ದರನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಹೋಗುವ ಮುನ್ನ ಮುದುಕ ತಂದೆ ತನ್ನ ಮಕ್ಕಳಿಗೆ ಹೇಳುತ್ತಾನೆ "ನಿನ್ನೆ ನೀವು ನಮ್ಮ ಮೇಲೆ ಅವಲಂಬಿತರಾಗಿದ್ರಿ, ಇಂದು ನಾವು ನಿಮ್ಮ ಮೇಲೆ ಅವಲಂಬಿತರಾಗಿದ್ದೇವೆ ಇದು ಒಂದು ಕಾಲಚಕ್ರ ಎಂದು ಹೇಳುವ ಮನಕಲಕುವ ದೃಶ್ಯ ನೋಡುಗರ ಕಣ್ಣಲ್ಲಿ ನೀರು ತರಿಸಿದವು. ಕಾಲಚಕ್ರ ನಾಟಕವು ಮನೆ ಮನೆಯ ಕಥ–'ಯಾಗಿದೆ. ಸರ್ವಕಾಲಕ್ಕೂ ಸಲ್ಲುವ ನಾಟಕವಾಗಿದೆ.

ಆರ್ಥಿಕ ಅಸುರಕ್ಷತೆ, ಮಕ್ಕಳ ಮೇಲಿನ ಅವಲಂಬನೆ, ಭವಿಷ್ಯದ ಮೇಲಿನ ಅನಿಶ್ಚಿತತೆಗಳು, ಕುಟುಂಬ ಸದಸ್ಯರ ನಿರ್ಲಕ್ಷ್ಯ, ಸಾಮಾಜಿ–ಕ ಸಂಪರ್ಕಗಳ ಕೊರತೆಯಿಂದ ಒಂಟಿತನದ ವೇದನೆ ಇವು ಎಲ್ಲವನ್ನು ಒಳಗೊಂಡ ನಾಟಕವೆ ಕಾಲಚಕ್ರವಾಗಿದೆ. ನಾಟಕದಲ್ಲಿ ವೃದ್ಧಾಪ್ಯದ ಸೂಕ್ಷ್ಮ ಸಂವೇದನೆಗಳು ಬಹಳ ಸೊಗಸಾಗಿ ಮೂಡಿಬಂದಿದೆ. ಕಲಬುರಗಿ ರಂಗಾಯಣ ರೆಪರ್ಟರಿ ಕಲಾವಿದರು ಅಷ್ಟೇ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಒಟ್ಟಾರೆ ನಾಟಕ ಪ್ರೇಕ್ಷಕರ ಮನಕಲಕಿಸಿತ್ತು. ಶಾಸಕ ಎಂ.ವೈ.ಪಾಟೀಲ, ಕಲಬುರಗಿ ರಂಗಾಯಣ ನಿರ್ದೇಶಕಿ ಡಾ.ಸುಜಾತಾ ಜಂಗಮಶೆಟ್ಟಿ, ಆಡಳಿತಾಧಿಕಾರಿ ಸಿದ್ರಾಮ ಶಿಂಧೆ ಸಹ ನಾಟಕ ವೀಕ್ಷಿಸಿದರು.

## ನೇಮಕಾತಿ ಪ್ರಕಟಣೆ

DHFWS ರಾಯಚೂರು ನೇಮಕಾತಿ 2026–20 ಜೂನಿಯರ್ ಮಹಿಳಾ ಆರೋಗ್ಯ ಸಹಾಯಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ DHFWS ರಾಯಚೂರು ನೇಮಕಾತಿ 2026: 20 ಜೂನಿಯರ್ ಮಹಿಳಾ ಆರೋಗ್ಯ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರು ಫೆಬ್ರವರಿ 2026 ರ DHFWS ರಾಯಚೂರು ಅಧಿಕೃತ ಅಧಿಸೂಚನೆಯ ಮೂಲಕ ಜೂನಿಯರ್ ಮಹಿಳಾ ಆರೋಗ್ಯ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ರಾಯಚೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಮಾರ್ಚ್ 11, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 25–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11–ಮಾರ್ಚ್–2026 ಅಧಿಕೃತ ವೆಬ್‌ಸೈಟ್: raichur.nic.in

## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ. ಶ್ರೀವಲ್ಲಿ ಲಾವಣ್ಯ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪ್ರತೀ ಶನಿವಾರದಂತೆ ಸಿಂಧನೂರು ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜೀನಲ್ಲಿ ನಡೆಯುವ ಉಪನ್ಯಾಸ ಸರಣಿಯ ಅಂಗವಾಗಿ, ದಿನಾಂಕ ಫೆಬ್ರವರಿ 28 ಶನಿವಾರದಂದು ಅತ್ಯಂತ ಉಪಯುಕ್ತ ಹಾಗೂ ಜ್ಞಾನವರ್ಧಕವಾದ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.**

ಈ ಸಂದರ್ಭದಲ್ಲಿ ಸನ್ ರೈಸ್ ವಿದ್ಯಾ ಸಂಸ್ಥೆಗೆ ಸುಹಾಸ್ತಾ ಹೆಲ್ತ್ ಕೇರ್ ಸಿಂಧನೂ–ರಿನ ಪ್ರಸೂತಿ, ಸ್ತ್ರೀ ರೋಗ ಹಾಗೂ ಬಂಜೆತನ ನಿವಾರಣಾ ತಜ್ಞರಾದ ಡಾ. ಶ್ರೀವಲ್ಲಿ ಲಾವಣ್ಯ ಚೇರುಕುರಿ (MBBS, MS, OBG & GYN) ಅವರು ಗೌರವಾನ್ವಿತ ಅತಿಥಿಯಾಗಿ ಆಗಮಿಸಿ ಶನಿವಾರದ ವಿಶೇಷ ಉಪನ್ಯಾಸ ನೀಡಿದರು.ಡಾ. ಶ್ರೀವಲ್ಲಿ ಲಾವಣ್ಯ ಚೇರುಕುರಿ ಅವರು ``Painless Delivery'' ಎಂಬ ಸಮಕಾಲೀನ ಹಾಗೂ ಬಹುಮುಖ್ಯ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿಯನ್ನು ನೀಡಿದರು.

ತಮ್ಮ ಉಪನ್ಯಾಸದಲ್ಲಿ ಅವರು ಸಹಜ ಪ್ರಸವ ಮತ್ತು ಪೇನ್‌ಲೆಸ್ ಡೆಲಿವರಿ ನಡುವಿನ ವ್ಯತ್ಯಾಸ ಪೇನ್‌ಲೆಸ್ ಡೆಲಿವ–




ರಿಯಲ್ಲಿ ಬಳಸುವ ವಿಧಾನಗಳು (ಉದಾಹರಣೆಗೆ: ಎಪಿಡ್ಯುರಲ್ ಅನಸ್ತೇಶಿಯಾ) ತಾಯಿಯ ಹಾಗೂ ಶಿಶುವಿನ ಸುರಕ್ಷತೆ ಪ್ರಸವ ಸಮಯದಲ್ಲಿ ನರ್ಸಿಂಗ್ ಸಿಬ್ಬಂದಿಯ ಪಾತ್ರ ತುರ್ತು ಪರಿಸ್ಥಿತಿಗಳಲ್ಲಿ ತಕ್ಷಣದ ನಿರ್ಧಾರ ಸಾಮರ್ಥ್ಯ ಇವುಗಳ ಕುರಿತು ಸುಲಭ ಮತ್ತು ಸ್ಪಷ್ಟವಾದ ಭಾಷೆಯಲ್ಲಿ ವಿವರಿಸಿದರು.ವಿದ್ಯಾರ್ಥಿಗಳು ತಮ್ಮ ಸಂದೇಹಗಳನ್ನು ಕೇಳಿ ಸ್ಪಷ್ಟನೆ ಪಡೆದುಕೊಂಡರು. ಈ ಸಂವಾದಾತ್ಮಕ ಅಧಿವೇಶನವು ವಿದ್ಯಾರ್ಥಿಗಳಲ್ಲಿ ವೈದ್ಯಕೀಯ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ವೃತ್ತಿ ಬದುಕಿನ ಬಗ್ಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿತು.

ಡಾಕ್ಟರ್ ಅವರು ತಮ್ಮ ಮಾತುಗಳಲ್ಲಿ ನರ್ಸಿಂಗ್ ವೃತ್ತಿಯ ಮಹತ್ವವನ್ನು ವಿಶೇಷವಾಗಿ ಒತ್ತಿ ಹೇಳಿದರು. ರೋಗಿಯ ಆರೈಕೆಯಲ್ಲಿ ನರ್ಸಿಂಗ್ ಸಿಬ್ಬಂದಿಯ ಮಾನವೀಯತೆ ಸೇವಾ ಮನೋಭಾವ ಸಮಯಪಾಲನೆ ಮತ್ತು ಶಿಸ್ತಿನ ಮಹತ್ವ ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ವೃತ್ತಿಯ ಗೌರವ ಇವುಗಳ ಬಗ್ಗೆ ಪ್ರೇರಣಾದಾಯಕವಾಗಿ ಮಾತನಾಡಿದರು.ಕಾರ್ಯಕ್ರಮದ ಕೊನೆಯಲ್ಲಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರು ಲಾಜರ್ ಸಿರಿಲ್ ಅವರು ಮಾತನಾಡಿ, ಇಂತಹ ಉಪನ್ಯಾಸ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಹಾಗೂ



ವೃತ್ತಿಪರ ಕೌಶಲ್ಯಗಳ ವೃದ್ಧಿಗೆ ಬಹಳ ಸಹಾಯಕವಾಗಿವೆ ಎಂದು ತಿಳಿಸಿದರು.

ಅವರು ಡಾ. ಶ್ರೀವಲ್ಲಿ ಲಾವಣ್ಯ ಚೇರುಕುರಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ, ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.ಈ ವಿಶೇಷ ಶನಿವಾರದ ಉಪನ್ಯಾಸ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಹೊಸ ಅರಿವು, ಆತ್ಮವಿಶ್ವಾಸ ಹಾಗೂ ವೃತ್ತಿ ಜೀವನದ ಪ್ರೇರಣೆಯನ್ನು ನೀಡಿದ ಸ್ಮರಣೀಯ ಕ್ಷಣವಾಗಿ–ತ್ತು. ಈ ಸಂದರ್ಭದಲ್ಲಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರು ಸಿರಿಲ್,ಆಸಿಫ್ ಹಾಗೂ ಸುಹಾಸ್ತಾ ಆಸ್ಪತ್ರೆಯ ಶುಶ್ರೂಷಾ ಅಧಿಕಾರಿ ಸಮ್ರೀನ್ ಹಾಗೂ ಎಲ್ಲಾ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜಾಮೀಯಾ ಮಸೀದಿ ಸ್ಥಳಕ್ಕೆ ಜಿಲ್ಲಾ ವಕ್ಫ್ ಬೋರ್ಡ್ ಸಿಇಒ ಭೇಟಿ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಜಾಮೀಯಾ ಮಸೀದಿಗೆ ಜಿಲ್ಲಾ ವಕ್ಫ್ ಬೋರ್ಡ್ ಮುಖ್ಯಕಾರ್ಯ ನಿರ್ವಾಹಕಾಧಿಕಾರಿ ಹಲೀಮುದ್ದೀನ್ ಭೇಟಿ ಕಾಮಗಾ–ರಿಯನ್ನು ಪರಿಶೀಲಿಸಿದರು. ಮಸೀದಿ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದ ಕಾರಣ ರಾಜ್ಯ ವಕ್ಫ್ ಬೋರ್ಡ್ ಸಮಿತಿ ಆದೇಶ ದಂತೆ ಜಾಮೀಯಾ ಮಸೀದಿ ಹಳೆ ಕಟ್ಟಡವನ್ನು ನೆಲಸಮ ಮಾಡಲಾಗಿದ್ದು, ಹೊಸ ಕಟ್ಟಡ ಕಾಮಗಾರಿ ಶೀಘ್ರದಲ್ಲಿ ಪ್ರಾರಂಭಿಸಲಾಗುವುದು ಎಂದು ಜಾಮೀಯಾ ಮಸೀದಿ ಕಮೀಟಿ ಅಧ್ಯಕ್ಷ ಮಹ್ಮದ್‌ಸಾಬ್ ಮಕಾನದಾರ ಅಧಿಕಾರಿ ಗಮನಕ್ಕೆ ತಂದರು.**



ನಂತರ ಜಿಲ್ಲಾ ವಕ್ಫ್ ಬೋರ್ಡ್ ಸಿಇಒ ಹಲೀಮುದ್ದಿನ್ ಮಾತನಾಡಿ, ಮಸೀದಿ ಕಟ್ಟಡಕ್ಕೆ ರಾಜ್ಯ ವಕ್ಫ್ ಸಮಿತಿ ಅನುದಾನ ನೀಡಲಿದ್ದು, ಅಗತ್ಯ ದಾಖಲೆ ಪ್ರಮಾಣ ಪತ್ರಗಳನ್ನು ನೀಡಿದರೆ ರಾಜ್ಯ ಸಮಿತಿಗೆ ಅನುದಾನ ನೀಡಲು ಶಿಫಾರಸ್ಸು ಮಾಡಲಾಗುತ್ತದೆ ಎಂದಯ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜಾಮೀಯಾ ಮಸೀದಿ ಕಮೀಟಿ ಸದಸ್ಯರು ಸಿಇಒ ಅವರಿಗೆ ಸನ್ಮಾನಿಸಿದರು. ಕಮೀಟಿ ಕಾರ್ಯದರ್ಶಿ ರಿಯಾಜ್ ಖಾಜಿ, ಅಬ್ದುಲ್ ಗನಿ ಬಳ್ಳಾರಿ, ಹಸನ್‌ಸಾಬ್ ಬ್ಯಾಂಕ್, ಬಾಬುಸಾಬ್ ಛತ್ರಿ, ಅಬ್ದುಲ್ ಅಜೀಜ್ ಇದ್ದರು.

## ಎನ್ ಎಸ್ ಎಸ್ ಆದರ್ಶ ವ್ಯಕ್ತಿತ್ವದ ಆಗರ :ಶ್ರೀ ಮಲ್ಲಿಕಾರ್ಜುನ ಕಮಾತಗಿ ಸಹಕಾರ ಇಲಾಖೆ




ನೈಜ್ಯ ದೆಸೆ ನ್ಯೂಸ್

**ದಿನಾಂಕ 27.02.2026 ರಂದು ಸುಕ್ಷೇತ್ರ ಅಂಬಾಮಠ ಗ್ರಾಮದಲ್ಲಿ ಸಿಂಧನೂರು ನಗರದ ನೊಬೆಲ್ ಮಹಾವಿದ್ಯಾಲಯದ ಎನ್ ಎಸ್ ಎಸ್ ಘಟಕದ ವತಿಯಿಂದ 2025–26 ನಾ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು ಎರಡನೇ ದಿನದ ಗ್ರಾಮೀಣ ಅಭಿವೃದ್ಧಿಯಲ್ಲಿ ಎನ್‌ಎಸ್‌ಎಸ್ ಪಾತ್ರ ಎಂಬ ವಿಷಯವನ್ನು ಮಂಡಿಸಿ ಶ್ರೀ ಮಲ್ಲಿಕಾರ್ಜುನ ಕಮತಗಿ ರವರು ಗ್ರಾಮೀಣ ಅಭಿವೃದ್ಧಿಗೆ ಎನ್ ಎಸ್ ಎಸ್ ಪಾತ್ರ ಅಮೂಲ್ಯವಾದದು, ಎಂದು ಎನ್ ಎಸ್ ಎಸ್ ಇರುವುದರಿಂದ ಗ್ರಾಮಗಳು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿವೆ ಎಂಬ ಆಶಾ ಮನೋಭಾವನೆಯನ್ನು ವ್ಯಕ್ತಪಡಿಸಿದರು.**

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮೈ ಭಾರತ್ ಯುವ ಭಾರತ್ ಬಳಕೆ ಹಾಗೂ ಒಬ್ಬ ಸಾಮಾನ್ಯ ವಿದ್ಯಾರ್ಥಿಯನ್ನು ರಾಷ್ಟ್ರಮಟ್ಟದವರೆಗೆ ಬಹುಬೇಗ ಕರೆದುಕೊಂಡು ಹೋಗುವ ದೊಡ್ಡ ವೇದಿಕೆ ಎಂದರೆ ಅದು ಎನ್ ಎಸ್ ಎಸ್ ಎಂದು ತಿಳಿಸಿದರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನೋಬೆಲ್ ಪದವಿ ಮಹಾವಿದ್ಯಾಲಯದ ವಾಣಿಜ್ಯೋಪನ್ಯಾಸಕರ ಯಂಕೋಬಾ ಬೂದಿಹಾಳ, ಮುಖ್ಯ ಅತಿಥಿಯಾಗಿ ರಮೇಶ್ ಹಲಗಿ, ಅತಿಥಿಗಳಾಗಿ ಕಾಲೇಜಿನ ಬಸವರಾಜ್ ದೇವಪುರ ದೇವೇಂದ್ರ ಕವಿತಾ ಹಾಗೂ ಕಾರ್ಯಕ್ರಮ ಅಧಿಕಾರಿಗಳಾದ ಹೊನ್ನಪ್ಪ ಬೆಳಗುರ್ಕಿ ಭಾಗವಹಿಸಿದ್ದರು,

ಕಾಲೇಜ್ ಇತಿಹಾಸ ಉಪನ್ಯಾಸಕರಾದ ದೇವೇಂದ್ರರವರು ವಿದ್ಯಾರ್ಥಿಗಳಿಗೆ ಭಗತ್ ಸಿಂಗನ ದೇಶ ಪ್ರೇಮ ಪರಿಸರಮ ಶಿಸ್ತನ್ನು ಕುರಿತು ವಿವರಿಸಿದರೆ ಕುಮಾರಿ ಕವಿತಾರವರು ವಿದ್ಯಾರ್ಥಿಗಳ ಬಂಗಾರದ ಜೀವನಮಯಕ್ಕೆ ಎನ್ ಎಸ್ ಎಸ್ ಹಿಡಿದ ಕನ್ನಡಿ ಎಂದು ತಿಳಿಸಿದರು, ವೇದಿಕೆ ಮೇಲೆ ಇರುವ ಎಲ್ಲಾ ಅತಿಥಿಗಳು ವಿದ್ಯಾರ್ಥಿಗಳಿಗೆ ಎನ್–ಎಸ್‌ಎಸ್ ನ ಮಹತ್ವ ತಿಳಿಸಿದರು. ಈ ಕಾರ್ಯಕ್ರಮದ ನಿರ್ವಹಣೆ ರಮಾಭಾಯಿ ತಂಡದವರು ನೆರವೇರಿಸಿದರು, ನಂದಿನಿ (6th) ನಿರೂಪಿಸಿದರು ಮೇಘ (4th) ತಂಡ ಪ್ರಾರ್ಥಿಸಿದರು ದೇವರಾಜ್ ನಾಯಕ್ (6ಋ) ಸ್ವಾಗತಿಸಿದರು ವೀರೇಶ್ ದ್ವಿತೀಯ ಸೆಮಿಸ್ಟರ್ ವಂದಿಸಿದರು.

## ಪಿಯು ಪರೀಕ್ಷೆ :597 ಹಾಜರಿ–28 ಗೈರು

ನೈಜ್ಯ ದೆಸೆ ನ್ಯೂಸ್

**ಸಿರವಾರ: 2026 ನೇ ಸಾಲಿನ ದ್ವಿತೀಯ ವರ್ಷದ ಪಿಯುಸಿ ಪರೀಕ್ಷೆಯು ಇಂದಿನಿಂದ (ಶನಿವಾರ) ಪ್ರಾರಂಭವಾಗಿದ್ದು, ಮೊದಲ ದಿನ ಕನ್ನಡ ವಿಷಯ ಪರೀಕ್ಷೆಗೆ ಒಟ್ಟು ಎರಡು ಕೇಂದ್ರ ಸೇರಿ ಒಟ್ಟು 625 ವಿದ್ಯಾರ್ಥಿಗಳು ನೊಂದಣಿ ಮಾಡಿಸಿದರೆ, 28 ವಿದ್ಯಾರ್ಥಿಗಳು ಗೈರು,597 ಹಾಜರಿಯಾಗಿ ಪರೀಕ್ಷೆ ಬರೆದರು.**



ಮೊದಲ ದಿನ ಶಾಂತಿಯುತವಾಗಿ ಪರೀಕ್ಷೆ ಜರುಗಿತು. ಸರ್ಕಾರಿ ಪದವಿ ಪೂರ್ವ ಕಾಲೇಜು ಸಿರವಾರ ಕೇಂದ್ರದಲ್ಲಿ ಒಟ್ಟು ವಿದ್ಯಾರ್ಥಿಗಳು 311. ಹಾಜರಾದ ವಿದ್ಯಾರ್ಥಿಗಳು 285, ಗೈರು ಹಾಜರಾದ ವಿದ್ಯಾರ್ಥಿಗಳು 26, ಎಂದು ಪರೀಕ್ಷೆಯ ಮುಖ್ಯಾಧಿಕ್ಷಕ ಹನುಮಂತ ಚನ್ನರು ತಿಳಿಸಿದರು.ಕೇಂದ್ರ ಸಂಖ್ಯೆ 02 ಅಮರೇಗೌಡ ಪಾಟೀಲ್ ಬಯ್ಯಾಪುರ ಪದವಿ ಪೂರ್ವ ಕಾಲೇಜ್ ಒಟ್ಟು ವಿದ್ಯಾರ್ಥಿಗಳು 314 ಹಾಜರಾದ ವಿದ್ಯಾರ್ಥಿಗಳು 312 , ಗೈರು ಹಾಜರಾದ ವಿದ್ಯಾರ್ಥಿಗಳು 02 ಎಂದು ತಿಳಿಸಿದರು.

## ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ: ಸಚಿವ ಎನ್ ಎಸ್ ಬೋಸರಾಜು

ನೈಜ್ಯ ದೆಸೆ ನ್ಯೂಸ್

**ಮಾನವಿ: ನೀರಮಾನ್ವಿ ಗ್ರಾಮದ ಶ್ರೀ ಸಿದ್ಧಾರೂಢ ಮಠದಲ್ಲಿ ಸಮುದಾಯ ಭವನ ನಿರ್ಮಾಣ ಕಾರ್ಯಕ್ಕೆ ಭೂಮಿ ಪೂಜೆ ನೆರವೇರಿದ ಈ ಕಾರ್ಯಕ್ರಮ ಗ್ರಾಮಸ್ಥರಲ್ಲಿ ಅಪಾರ ಉತ್ಸಾಹವನ್ನು ಮೂಡಿಸಿತು.**

ಗ್ರಾಮಾಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಕ್ರಮೇಣ ಜಾ–ರಿಗೆ ತರಲಾಗುತ್ತಿದೆ ಎಂಬುದನ್ನು ಜನಪ್ರತಿನಿಧಿಗಳು ಸ್ಪಷ್ಟಪಡಿಸಿದರು. ಸಚಿವರಾದ ಎನ್. ಎಸ್. ಬೋಸರಾಜು ಅವರು ಮಾತನಾಡಿ, "ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯಗಳನ್ನು ಬಲಪಡಿಸುವುದು ಸರ್ಕಾರದ ಪ್ರಮುಖ ಗುರಿಯಾಗಿದೆ. ಧಾರ್ಮಿಕ ಕೇಂದ್ರಗಳೊಂದಿಗೆ ಸಮುದಾಯ ಭವನಗಳ



ನಿರ್ಮಾಣವು ಸಮಾಜದ ಏಕತೆ ಮತ್ತು ಸಂಸ್ಕೃತಿಯ ಉಳಿವಿಗೆ ಸಹಕಾರಿ ಆಗುತ್ತದೆ. ಈ ಭವನವು ಮುಂದಿನ ಪೀಳಿಗೆಗಳಿಗೆ ಉಪಯುಕ್ತ ಕೇಂದ್ರವಾಗಲಿದೆ" ಎಂದು ತಿಳಿಸಿದರು.

ಶಾಸಕರಾದ ಜಿ. ಹಂಪಯ್ಯ ನಾಯಕ್ ಅವರು ತಮ್ಮ ಭಾಷಣದಲ್ಲಿ, "ಕ್ಷೇತ್ರದ ಅಭಿವೃದ್ಧಿಗೆ ನಾವು ಬದ್ಧರಾಗಿದ್ದೇವೆ. ನೀರ್ ಮಾನ್ವಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣದಿಂದ ಸಾರ್ವಜನಿಕ ಕಾರ್ಯಕ್ರಮಗಳು ಸುಗಮವಾಗಿ ನಡೆಯಲಿವೆ. ಗ್ರಾಮಸ್ಥರ ಸಹಕಾರದೊಂದಿಗೆ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ" ಎಂದು ಹೇಳಿದರು. ಈ ಯೋಜನೆಯಡಿ ನಿರ್ಮಾಣವಾಗುವ ಭವನವು ಸಾಮಾಜಿಕ ಸಭೆಗಳು, ಮಹಿಳಾ ಸಂಘಗಳ ಕೂಟಗಳು, ಯುವಕರ ಕಾರ್ಯಕ್ರಮಗಳು, ಧಾರ್ಮಿಕ ಆಚ–'ರಣೆಗಳು ಹಾಗೂ ವಿವಿಧ ಸಾರ್ವಜನಿಕ ಚಟುವಟಿಕೆಗಳಿಗೆ ಕೇಂದ್ರವಾಗಲಿದೆ.

ಇದರಿಂದ ಗ್ರಾಮದಲ್ಲಿ ಸಂಘಟಿ–ತ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಕಾರ್ಯಕ್ರಮದಲ್ಲಿ ಹಾಜರಿದ್ದ ಮುಖಂಡರು ಹಾಗೂ ಗ್ರಾಮಸ್ಥರು ಸರ್ಕಾರದ ಈ ಕ್ರಮವನ್ನು ಸ್ವಾಗತಿಸಿ, ಕಾಮಗಾರಿ ಗುಣಮಟ್ಟದಿಂದ ಹಾಗೂ ಸಮಯಕ್ಕೆ ಪೂರ್ಣಗೊಳ್ಳಲಿ ಎಂದು ಆಶಿಸಿದರು. ಗ್ರಾಮಾಭಿವೃದ್ಧಿಯ ದಿಸೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಎಲ್ಲರೂ ಅಭಿಪ್ರಾಯಪಟ್ಟರು.

## ಜಾತ್ರೆ, ಹಬ್ಬ, ಉತ್ಸವಗಳಲ್ಲಿ ಶುದ್ದ ನೀರು, ಆಹಾರ, ಸೇವನೆ ಹಾಗೂ ನೈರ್ಮಲ್ಯ ಕಾಪಾಡಿ, ಸಾಂಕ್ರಾಮಿಕ ರೋಗ, ವಾಂತಿ–ಭೇದಿ ಪ್ರಕರಣಗಳ ತಡೆಗೆ ಸಹಕರಿಸಿ:ಡಾ ಸುರೇಂದ್ರಬಾಬು

ನೈಜ್ಯ ದೆಸೆ ನ್ಯೂಸ್

**ನಾವು ಆಚರಿಸುವ ಜಾತ್ರೆ, ಹಬ್ಬ, ಉತ್ಸವಗಳು ನಮ್ಮ ಸಂಸ್ಕೃತಿ, ಸಮಾಜಿಕ ಪರಂಪರೆಯ ಭಾಗವಾಗಿದ್ದು, ಲಕ್ಷಾಂತರ ಜನ ಸೇರುವ ಪ್ರಮುಖ ಜಾತ್ರೆ, ಉತ್ಸವಗಳ ಆವರಣದಲ್ಲಿ ನೈರ್ಮಲ್ಯ ಕಾಪಾಡುವ, ಶುದ್ದ ನೀರು, ಆಹಾರ, ಸೇವನೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಾತ್ರಾ ಸಮಿತಿ ಮೂಲಕ ಸೂಚಿಸುವ ಮಾಹಿತಿಯನ್ನು ಭಕ್ತರು ಅನುಸ–ರಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಸುರೇಂದ್ರಬಾಬು ವಿನಂತಿಸಿದರು.**

ಲಿಂಗಸೂಗೂರು ತಾಲ್ಲೂಕಿನ ಸುಪ್ರಸಿದ್ಧ ಗುರಗುಂಟಾ ಅಮರೇಶ್ವರ ಜಾತ್ರಾ ಹಿನ್ನೆಲೆಯಲ್ಲಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ, ರವರ ನೇತೃತ್ವದಲ್ಲಿ ಇಂದು ದೇವಸ್ಥಾನದ ಆವರಣದ ಬಜಾರ್ ಭಾವಿ, ಕೆರೆಬಾವಿ, ಹಾಗೂ ಗುರಗುಂಟಾ ಅಡವಿಯಲ್ಲಿರುವ ಎರಡು ಬೋರ್‌ವೆಲ್‌ಗಳ ನೀರು ಕ್ಲೋರಿನೆಷನ್ ಕೈಗೊಂಡಿರುವುದನ್ನು ಪರಿಶೀಲಿಸಿದ ಹಿನ್ನಲೆ ಮಾಹಿತಿ ನೀಡಿ, ಈಗಾಗಲೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಾರ್ಗದರ್ಶನದಲ್ಲಿ ತಾಲೂಕಾ ಆರೋಗ್ಯ ಅಧಿಕಾರಿ, ಗುರಗುಂಟಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ಆರೋಗ್ಯ ನಿರಿಕ್ಷಣಾಧಿಕಾರಿ, ಎಪಡಮಲಾಜಿಸ್ಟ್ ತಂಡವು ಜಾತ್ರಾ ಹಿನ್ನಲೆಯಲ್ಲಿ




ಎಲ್ಲ ನೀರಿನ ಮೂಲಗಳನ್ನು ಗ್ರಾಮ ಪಂಚಾಯತ ಸಿಬ್ಬಂದಿಯ ಮೂಲಕ ಪರೀಕ್ಷೆ ಕೈಗೊಂಡು ನಿರಂತರ ಕ್ಲೋರಿನೆಷನ್ ಮಾಡಲಾಗುತ್ತಿದ್ದು,

ಎಲ್ಲಾ ನೀರಿನ ಮೂಲಗಳ ಮಾದರಿಗಳನ್ನು ಸಂಗ್ರಹಿಸಿ ಜೈವಿಕ ಪರೀಕ್ಷೆಗೆ ಒಳಪಡಿಸಲಾಗಿದ್ದು, ಫಾಂಗಿಂಗ್ ನಿರಂತರವಾಗಿ ಮಾಡಕಾಗುತ್ತಿದ್ದು, ಇಂದಿನಿಂದಲೆ ಜಾತ್ರೆಗಳಲ್ಲಿ ಹಾಕಲಾಗುವ ಹೋಟೆಲ್, ತಿಂಡಿ ತಿನಿಸು ಮಾರಾಟಗಾರ–ರಿಗೆ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ಬಳಸಲು ಸೂಚಿಸಲಾಗುತ್ತಿದೆ ಅಲ್ಲದೆ ದೇವಸ್ಥಾನದ



ಸುತ್ತಮುತ್ತಲಿನ ಆವರಣದಲ್ಲಿ ಯಾವುದೇ ತ್ಯಾಜ್ಯ ಬಿಸಾಕದಂತೆ ಜನತೆಗೆ ಜಾಗೃತಿಯನ್ನು ಜಾತ್ರಾ ಸಮಿತಿಯ ಮೂಲಕ ನೀಡಲಾಗುವುದು ಎಂದು ಕರೆಯಲಾಗುತ್ತದೆ ತಿಳಿಸಿದರು. ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ, ಮಾತನಾಡಿ ಸಾರ್ವಜನಿಕರು ತೆರೆದಿಟ್ಟ ಆಹಾರ ಸೇವಿಸದಂತೆ,

ಜಾತ್ರಾ ಸಮಿತಿಯ ಮೂಲಕ ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಸ್ವಚ್ಛ ಹಾಗೂ ಶುದ್ಧವಾದ ಕ್ಲೋರಿನೇಷನ್ ಮಾಡಿ ಸರಬುರಾಜು ಮಾಡುವ ನೀರನ್ನು ಮಾತ್ರ ಕುಡಿಯಲು ಬಳಸುವಂತೆ ಜಾಗೃತಿ ನೀಡಲಾಗುತ್ತಿದ್ದು, ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಲು, ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಲು. ತಂಗಳು ಆಹಾರವನ್ನು ಸೇವಿಸದೇ ಬಿಸಿಯಾದ ಆಹಾರ ಮಾತ್ರ ಸೇವಿಸಲು ಜಾಗೃತಿ ನೀಡಲು ತಂಡಗಳನ್ನು ರಚಿಸಲಾಗಿದ್ದು, ಜಾತ್ರಾ ಸಮಿತಿಯ ಮೂಲಕ ನಿರಂತರ ಪ್ರಚಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಕ್ಕಳ ಆರೋಗ್ಯಕ್ಕೆ ಸುರಕ್ಷತೆ: ಅಲ್ಲದೆ ಮಕ್ಕಳಿಗೆ ಅನಗತ್ಯವಾಗಿ ಹೊರಗಿನ ಆಹಾರ ಪದಾರ್ಥ ಕೊಡದೆ ಮನೆಯ ಆಹಾರಕ್ಕೆ ಆದ–'ತೆ ನೀಡಬೇಕು. ಜಾತ್ರೆಯಲ್ಲಿ ವಸತಿ ಮಾಡುವ ಸ್ಥಳದ ಸುತ್ತಲೂ ಸ್ವಚ್ಛತೆ ಕಾಪಾಡಿ ನೊಣ, ಹುಳ ಹುಪ್ಪಡಿಗಳಾದಂತೆ ನೋಡಿಕೊಳ್ಳಲು ತಿಳಿಸಿದರು.

ಜಾತ್ರೆಯಲ್ಲಿ ಬಿಸಿಲಿನ ತಾಪಮಾನದಿಂದ ರಕ್ಷಣೆ ಬಿಸಿಲು ಹೆಚ್ಚಿದ್ದರೆ ಟೋಪಿ/ಛತ್ರಿ ಬಳಸಿ ಸಾಕಷ್ಟು ನೀರು ಕುಡಿಯಿರಿ, ದೇಹಕ್ಕೆ ನೀರಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಆರೋಗ್ಯ ಸಮಸ್ಯೆಗಳಿದ್ದರೆ ನಿಯಮಿತವಾಗಿ ಸೇವಿಸುವ ಅಗತ್ಯ ಔಷಧಿಗಳನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು. ಜ್ವರ, ಅಸ್ವಸ್ಥತೆ ಇದ್ದರೆ ವಿಶ್ರಾಂತಿ ತೆಗೆದುಕೊಳ್ಳಬೇಕು. ದೂಳಿನ ಅಲರ್ಜಿ, ಕೆಮ್ಮು, ಇದ್ದರೆ ಮಾಸ್ಕ್ ಧರಿಸಬೇಕು.

ತುರ್ತು ಚಿಕಿತ್ಸಾ ಕೇಂದ್ರ ಹಾಗೂ ಆ?ಯಂಬುಲೇನ್ಸ್ ಸೇವೆ: ಯಾವುದೇ ಅರೋಗ್ಯ ಸಮಸ್ಯೆ ಕಂಡುಂಬಂದರೆ ಜಾತ್ರಾ ತುರ್ತು ಚಿಕಿತ್ಸಾ ಕೇಂದ್ರದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು.

ಜನಸಂದಣಿ ಸುರಕ್ಷತೆ: ಮಕ್ಕಳನ್ನು ಮತ್ತು ಹಿರಿಯರನ್ನು, ಗಮನದಲ್ಲಿಟ್ಟುಕೊಂಡು ಹೆಚ್ಚು ಜನಜಂಗುಳಿ ಸ್ಥಳಗಳಲ್ಲಿ ಆರೋಗ್ಯದ ಸಮಸ್ಯೆಯಾದಂತೆ ಜಾಗರೂಕತೆ ವಹಿಸಲು ತಿಳಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಏರೋನಾಟಿಕಲ್ ಇಂಜಿನಿಯರಿಂಗ್

ಅಟೋಮೊಬೈಲ್ ಇಂಜಿನಿಯರಿಂಗ್ (Automobile Engineering) ವಾಹನಗಳ ವಿನ್ಯಾಸಉತ್ಪಾದನೆಮತ್ತು ನಿರ್ವಹಣೆಯನ್ನು ಒಳಗೊಂಡ 4 ವರ್ಷಗಳ ಬಿ.ಇ/ಬಿ.ಟೆಕ್ ಅಥವಾ 3 ವರ್ಷಗಳ ಡಿಪ್ಲೊಮಾ ಕೋರ್ಸ್ ಆಗಿದೆ. ಇದು ಎಂಜಿನ್ಎಲೆಕ್ಟ್ರಿಕಲ್ ಸಿಸ್ಟಮ್ಮತ್ತು ಇಂಧನ ತಂತ್ರಜ್ಞಾನದ ಮೇಲೆ ಕೇಂದ್ರೀಕರಿಸುತ್ತದೆ. ಪ್ರಯಾಣಿಕರನ್ನು ಸಾಗಿಸಲು ಸಮರ್ಥವಾಗಿರುವ ಮೋಟಾರ್ ವಾಹನಗಳು ಜನಪ್ರಿಯವಾದಾಗಿನಿಂದಲೂ ಆಟೋಮೊಬೈಲ್ ಎಂಜಿನಿಯರಿಂಗ್ ಮಾನ್ಯತೆ ಮತ್ತು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈಗ ಆಟೋ ಬಿಡಿಭಾಗ ತಯಾರಕರು ಮತ್ತು ಆಟೋಮೊಬೈಲ್ ಉದ್ಯಮಗಳ ತ್ವರಿತ ಬೆಳವಣಿಗೆಯಿಂದಾಗಿ ಆಟೋಮೊಬೈಲ್ ಎಂಜಿನಿಯರ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ಆಟೋಮೊಬೈಲ್ ಎಂಜಿನಿಯರಿಂಗ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಅತ್ಯಂತ ಸವಾಲಿನ ವೃತ್ತಿಗಳಲ್ಲಿ ಒಂದಾಗಿದೆ, ಇದರ ವ್ಯಾಪ್ತಿ ವಿಶಾಲವಾಗಿದೆ. ಈ ಶಾಖೆಯು ಕಾರುಗಳು, ಟ್ರಕ್‌ಗಳು, ಮೋಟಾರ್‌ಸೈಕಲ್‌ಗಳು, ಸ್ಕೂಟರ್‌ಗಳು ಮುಂತಾದ ಆಟೋಮೊಬೈಲ್‌ಗಳ ವಿನ್ಯಾಸ, ಅಭಿವೃದ್ಧಿ, ಉತ್ಪಾದನೆ, ಪರೀಕ್ಷೆ, ದುರಸ್ತಿ ಮತ್ತು ಸೇವೆ ಮತ್ತು ಸಂಬಂಧಿತ ಉಪ ಎಂಜಿನಿಯರಿಂಗ್ ವ್ಯವಸ್ಥೆಯೊಂದಿಗೆ ವ್ಯವಹರಿಸುತ್ತದೆ. ಎಂಜಿನಿಯರಿಂಗ್ ಮತ್ತು ವಿನ್ಯಾಸ ಆಟೋಮೊಬೈಲ್‌ಗಳ ಪರಿಪೂರ್ಣ ಮಿಶ್ರಣಕ್ಕಾಗಿ, ಆಟೋಮೊಬೈಲ್ ಎಂಜಿನಿಯ-ರಿಂಗ್ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಮತ್ತು ಸುರಕ್ಷತಾ ಎಂಜಿನಿಯರಿಂಗ್‌ನಂತಹ ಎಂಜಿನಿಯರಿಂಗ್‌ನ ವಿವಿಧ ಅಂಶಗಳ ವೈಶಿಷ್ಟ್ಯಗಳನ್ನು ಬಳಸುತ್ತದೆ. ಆಟೋಮೊಬೈಲ್ ಎಂಜಿನಿಯರ್‌ನ ಪ್ರಮುಖ ಕಾರ್ಯವೆಂದರೆ ಪರಿಕಲ್ಪನೆಯ ಹಂತದಿಂದ ಉತ್ಪಾದನಾ ಹಂತದವರೆಗೆ ವಾಹನಗಳ ವಿನ್ಯಾಸ, ಅಭಿವೃದ್ಧಿ, ಉತ್ಪಾದನೆ ಮತ್ತು ಪರೀಕ್ಷೆ. ವಿದ್ಯಾರ್ಥಿಗಳು 12ನೇ ತರಗತಿಯಲ್ಲಿ (ಕಅಬ) ಉತ್ತೀರ್ಣರಾಗಿರಬೇಕು. ಇವಿ (ಇಗಿ) ಮತ್ತು ಹೈಬ್ರಿಡ್ ವಾಹನಗಳ ಬೆಳವಣಿಗೆಯಿಂದಾಗಿ ಈ ಕ್ಷೇತ್ರವು ಉತ್ತಮ ಉದ್ಯೋಗಾವಕಾಶಗಳನ್ನು ಹೊಂದಿದೆ. ಕರ್ನಾಟಕ ಸರ್ಕಾರ ಕರ್ನಾಟಕ ಸರ್ಕಾರ +3 ಅಟೋಮೊಬೈಲ್ ಇಂಜಿನಿಯ-ರಿಂಗ್ ಕೋರ್ಸ್ ವಿವರಗಳು (Course Details): ಕೋರ್ಸ್ ಹೆಸರು: Bachelor of Engineering (B.E) / B.Tech in Automobile Engineering. ಅವಧಿ: 4 ವರ್ಷಗಳು (8 ಸೆಮಿಸ್ಟರ್ಗಳು). ಅರ್ಹತೆ (Eligibility): 10+2 (PUC) ವಿಜ್ಞಾನ ವಿಭಾಗದಲ್ಲಿ (Physics, Chemistry, Mathematics - PCM) ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಡಿಪ್ಲೊಮಾ (Diploma): 3 ವರ್ಷಗಳ ಡಿಪ್ಲೊಮಾ ಇನ್ ಅಟೋಮೊಬೈಲ್ ಇಂಜಿನಿಯರಿಂಗ್ ಕೋರ್ಸ್ ಲಭ್ಯವಿದೆ. ಕೋರ್ಸ್ ವಿಷಯಗಳು (Subjects): ಎಂಜಿನ್ ವಿನ್ಯಾಸ (IC Engines) ವಾಹನ ಡೈನಾಮಿಕ್ಸ್ಆಟೋಮೋಟಿವ್ ಎಲೆಕ್ಟ್ರಾನಿಕ್ಸ್ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳು (ಇಗಿ) ಸೇಫ್ಟಿ ಇಂಜಿನಿಯರಿಂಗ್ಮತ್ತು ಉತ್ಪಾದನಾ ತಂತ್ರಜ್ಞಾನ. ಕಲಿಕಾ ವಿಧಾನ: ಥಿಯರಿಪ್ರಾಯೋಗಿಕ ತರಬೇತಿ-ಕಂಪ್ಯೂಟರ್ ಸಿಮ್ಯುಲೇಶನ್ಮತ್ತು ಇಂಡಸ್ಟ್ರಿಯಲ್ ಟ್ರೈನಿಂಗ್. ಉದ್ಯೋಗಾವಕಾಶಗಳು (Career Scope): ಹುದ್ದೆಗಳು: ಅಟೋಮೊಬೈಲ್ ಟೆಕ್ನಿಷಿಯನ್ಕ್ವಾಲಿಟಿ ಕಂಟ್ರೋಲ್ ಇಂಜಿನಿಯರ್ಮ್ಯಾನುಫ್ಯಾಕ್ಚರಿಂಗ್ ಇಂಜಿನಿಯರ್ಡಿಸೈನ್ ಇಂಜಿನಿಯರ್. ಕ್ಷೇತ್ರಗಳು: ಆಟೋಮೊಬೈಲ್ ತಯಾರಿಕಾ ಕಂಪನಿಗಳು (TATA, Maruti, Mahindra) ಸರ್ವಿಸ್ ಸೆಂಟರ್‌ಗಳುಮತ್ತು ಇಗಿ ಸ್ಟಾರ್ಟ್‌ಅಪ್‌ಗಳು. ಕರ್ನಾಟಕ ಸರ್ಕಾರ ಕರ್ನಾಟಕ ಸರ್ಕಾರ +2 ಕರ್ನಾಟಕದಲ್ಲಿ ಪ್ರಮುಖ ಸಂಸ್ಥೆಗಳು: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಚಳ್ಳಕೆರೆ. ಸರ್ಕಾರಿ ಪಾಲಿಟೆಕ್ನಿಕ್ಗೌರಿಬಿದನೂರು. MVJ College of Engineering, Bangalore

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಪ್ರಾಣಿ ಸಂಗ್ರಹಾಲಯ ಮಕ್ಕಳಿಗಾಗಿ ಸಾರ್ವಜನಿಕರಿಗಾಗಿ ತೆರೆಯಿರಿ ಸಂದೀಪ ಭರಣಿ ಒತ್ತಾಯ

ನೈಜ್ಯ ದೆಸೆ ನ್ಯೂಸ್



**ಕಲಬುರಗಿ: ನಗರದ ಹೃದಯ ಭಾಗದಲ್ಲಿ ಇರುವ ಜಗತ್ ವೃತಕ್ಕೆ ಹೊಂದಿಕೊಂಡಿರುವ ಸಾರ್ವಜನಿಕ ಉದ್ಯಾನವನದಲ್ಲಿ ಇರುವ ಮಕ್ಕಳ ಕಿರು ಪ್ರಾಣಿ ಸಂಗ್ರಹಾಲಯವನ್ನು ಸಾರ್ವಜನಿಕ ಮತ್ತು ಮಕ್ಕಳ ವಾಯು ವಿಹಾರಕ್ಕೆ ಅನುವು ಮಾಡಿಕೊಡಬೇಕು ಎಂದು ಅರಣ್ಯ ಇಲಾಖೆಗೆ ಸಂದೀಪ ಭರಣಿ ಒತ್ತಾಯ ಮಾಡಿದ್ದರು.**

ಮಧ್ಯಮ ಹೇಳಿಕೆ ನೀಡಿದ ಅವರು ಕಲಬುರಗಿ ನಗರ ಬಿಸಿಲಿಗೆ ಹೆಸರುವಾಸಿ, ಅಲ್ಲದೆ ಹವಾಮಾನ ಇಲಾಖೆಯ ವರದಿಯ ಪ್ರಕಾರ ಈ ಭಾರಿ ಜಿಲ್ಲೆಯಲ್ಲಿ ಬಿಸಿಲಿನ ಶೇಕೆ ಅತಿ ಹೆಚ್ಚು ಇರಲಿದ್ದು ನಗರದ ಜನತೆಗೆ ಉದ್ಯಾವನ ಅತಿ ಅವಶ್ಯವಾಗಿದೆ, ಕೆಲವೇ ದಿನಗಳಲ್ಲಿ ಶಾಲಾ ಕಾಲೇಜುಗಗಳಿಗೆ ರಜೆ ಇರಲಿದ್ದು, ತಮ್ಮ ರಜೆ ದಿನಗಳನ್ನು ಕಳೆಯಲು ಹಲವು ಮಕ್ಕಳು ತಮ್ಮ ಪೋಷಕರೊಂದಿಗೆ ಇಲ್ಲಿ ಬರುವುದು ಸಹಜ ಮತ್ತು ಜಗತ ವೃತ್ತದ ಸುತ್ತಲಿನ ಹಲವು ಬಡಾವಣೆಗಳಿಗೆ ಈ ಉದ್ಯಾನವನ ವರದಾನವಾಗಿದ್ದು ಬೆಳ್ಳಿಗೆ ವಾಯುವಿಹಾರ, ವ್ಯಾಯಾಮ ಆಟ ಆಡಲು ಮತ್ತು ಮಕ್ಕಳ ಮನೋರಂಜನೆಗೆ ಇಲ್ಲಿ ಭೇಟಿ ನೀಡುತ್ತಾರೆ,

ಆದರೆ ಅರಣ್ಯ ಇಲಾಖೆ ಕಳೆದ ಜನವರಿಯಲ್ಲಿ ಕಾಮಗಾರಿಯ ಹೆಸರಿನಲ್ಲಿ ಇದನ್ನು ಮುಚ್ಚಲಾಗಿದ್ದು ಹಲವು ಜನಗಳಿಗೆ ಬೇಸರ ಮೂಡಿಸಿದೆ, ಮಕ್ಕಳು ಇಲ್ಲಿ ಮುಚ್ಚಿರುವ ವಿಷಯ ತಿಳಿದು ಬೇಸರದಿಂದ ತಮ್ಮ ಮನಗೆ ಹೋಗ್ತಾ ಇರುವ ದೃಶ್ಯಗಳು ಮನಸಿಗೆ ತುಂಬಾ ನೋವು ಉಂಟು ಮಾಡುತ್ತೆ, ಅರಣ್ಯ ಇಲಾಖೆ ದೊಡ್ಡ ಮೊಟ್ಟದಲ್ಲಿ ಮಾಡಬೂಳ ಹತ್ತಿರ ನಿರ್ಮಾಣ ಮಾಡ್ತಾ ಇರುವುದು ಸಂತಸದ ವಿಷಯ, ಆದರೆ ಇಲ್ಲಿನ ಬಡ ಮತ್ತು ಮಧ್ಯಮ ವರ್ಗದ ಕುಟುಂಬ, ಸರ್ಕಾರಿ ನೌಕರರಿಗೆ ಇದು ತುಂಬಾ ಅನುಕೂಲಕರವಾಗಿದೆ, ಇವಾಗಲೇ ಅರಣ್ಯ ಇಲಾಖೆ ಎಚ್ಚೆತು ಬೇಸಿಗೆಯ ದಿನಗಳು ಪ್ರಾರಂಭವಾಗುವ ಮುಂಚೆನೇ ಸಾರ್ವಜನಿಕರ ಅನುಕೂಲಕ್ಕೆ ತೆರೆಯಬೇಕು ಎಂದು ಅರಣ್ಯ ಇಲಾಖೆಗೆ ಒತ್ತಾಯ ಮಾಡಿದರು.

## ಜ್ಯೋತಿಷಿ ಮಾತಿಗೆ ಪ್ರಾಣ ಕಳೆದುಕೊಂಡ ಟೆಕ್ಕಿ!

ನೈಜ್ಯ ದೆಸೆ ನ್ಯೂಸ್



**ಬೆಂಗಳೂರು: ನೀನು ಅಲ್ಪಾಯುಷಿ ಎಂದು ಭವಿಷ್ಯ ನುಡಿದಿದ್ದ ಜ್ಯೋತಿಷಿ?ಮಾತಿಗೆ ಹೆದರಿ ಟೆಕ್ಕಿಯೊಬ್ಬರು ಆತ್ಮಹತ್ಯೆಗೆ ಶರಣಾಗಿದ್ದಾರೆ. ವಿದ್ಯಾಜ್ಯೋತಿ (29) ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ನತದೃಷ್ಟ ಟೆಕ್ಕಿಯಾಗಿದ್ದಾರೆ.**

ಬೆಂಗಳೂರಿನ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿ ಎಂಇಐ ಲೇಔಟ್ ನಲ್ಲಿ ಈ ಘಟನೆ ನಡೆದಿದೆ. ಜ್ಯೋತಿಷಿಯ ಮಾತು ಕೇಳಿ, 9 ದಿನಗಳ ಕಾಲ ಪೂಜೆ ಸಲ್ಲಿಸಿದ್ದರು. 9ನೇ ದಿನದ ಪೂಜೆಯ ಕೊನೆಯಲ್ಲಿ ವಿದ್ಯಾಜ್ಯೋತಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಮಾರಮ್ಮ ದೇವರಿಗೆ ತಾಳಿ ಕೊಡಬೇಕಿದ್ದ ಕುಟುಂಬಸ್ಥರು ಮಗಳ ಸಾವಿನ ವಿಚಾರ ತಿಳಿದು ಶಾಕ್ ಆಗಿದ್ದಾರೆ. ರೂಮುನಲ್ಲೇ ಕಂಪನಿಯ ಕೆಲಸ ಮಾಡುತ್ತಿರಬೇಕು ಎಂದು ಪೋಷಕರು ಸುಮ್ಮನಾಗಿದ್ದಾರೆ. ಸಂಜೆ ತಾಯಿ ಕವಿತಾ ಕರೆದರೂ ವಿದ್ಯಾಜ್ಯೋತಿ ಪ್ರತಿಕ್ರಿಯಿಸಿಲ್ಲ. ವರ್ಕ್ ಫ್ರಂ ಹೋಮ್ ಆಗಿರುವುದ-ರಿಂದ ಕೆಲಸದಲ್ಲೇ ಬ್ಯುಸಿಯಾಗಿರಬೇಕು ಎಂದು ತಾಯಿ ಅಂದುಕೊಂಡಿದ್ದಾರೆ.

ರಾತ್ರಿ 8 ಗಂಟೆಗೆ ದೇವಸ್ಥಾನಕ್ಕೆ ಹೋಗಲು ವಿದ್ಯಾಜ್ಯೋತಿರನ್ನು ತಾಯಿ ಕವಿತಾ ಮತ್ತೆ ಕರೆದಿದ್ದಾರೆ. ಆದರೇ, ಡೋರ್ ಓಪನ್ ಮಾಡದೇ ಇದ್ದಾಗ, ಅನುಮಾನಗೊಂಡು, ಕಿಟಕಿಯಿಂದ ನೋಡಿದ್ದಾರೆ. ಕಿಟಕಿಯಲ್ಲಿ ವಿದ್ಯಾಜ್ಯೋತಿ ನೇಣು ಬಿಗಿದುಕೊಂಡಿರುವುದು ಗೊತ್ತಾಗಿದೆ. ಘಟನೆ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತದೇಹವನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಲಾಗಿದೆ. ಉಮೇಶ್, ಕವಿತಾ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳು. ಮೊದಲ ಮಗಳ ಮದುವೆ ಮಾಡಿದ್ದರು. ಎರಡನೇ ಮಗಳಾದ ವಿದ್ಯಾಜ್ಯೋತಿ ತಂದೆ, ತಾಯಿ ಜೊತೆ ಬಾಗಲಗುಂಟೆ ಎಂಇಐ ಲೇಔಟ್ ನಲ್ಲಿ ವಾಸ ಇದ್ದರು.

## ರೈತರ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿ. ಯಶೋಧ ಸಿ ನಾರಾಯಣ

ನೈಜ್ಯ ದೆಸೆ ನ್ಯೂಸ್



**ಕುಷ್ಟಗಿ: ನಾಡಿನದ್ಯಾಂತ ರೈತಪರ ವಿವಿಧ ಸಂಘಟನೆಗಳು ಯಾವುದೆ ಅಧಿಕಾರಿ ಮತ್ತು ರಾಜಕಾರಣಿಗಳ ಮಲಾಜಿಲ್ಲದೆ ರೈತರ ಸಮಸ್ಯೆಗಳ ಬಗ್ಗೆ ರೈತ ಸಂಘಟನೆಗಳು ಹೋರಾಟ ಮಾಡಲು ಮುಂದಾಗಬೇಕೆಂದು ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘದ ಮಹಿಳಾ ಘಟಕದ ರಾಜ್ಯಾಧ್ಯಕ್ಷ ಯಶೋಧ ಸಿ ನಾರಾಯಣ ಸಂಘಟಕರಲ್ಲಿ ಕಿವಿಮಾತು ಹೇಳಿದರು ಶನಿವಾರರಂದು ಕುಷ್ಟಗಿಯ ಪ್ರವಾಸ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘದ ಸಂಘಟನಾತ್ಮಕ ಸಮಾಲೋಚನ ಹಾಗೂ ನೂತನವಾಗಿ ಪದಾಧಿಕಾರಿಗಳ ಆಯ್ಕೆಯ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.**

ರೈತರಿಗೆ ಸಂಬಂಧಪಟ್ಟಂತ ಕೆಲವು ಇಲಾಖೆಗಳಲ್ಲಿ ರೈತರ ಸಮಸ್ಯೆಗಳನ್ನು ಆಲಿಸದೆ ನಿರ್ಲಕ್ಷ್ಯ ವಹಿಸುತ್ತಿದ್ದು ಅಂತ ಅಧಿಕಾರಿಗಳ ವಿರುದ್ಧ ನಮ್ಮ ಸಂಘಟಕರು ಧ್ವನಿ ಎತ್ತಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ರೈತ ಕುಟುಂಬಕ್ಕೆ ಸಿಗುವ ಕೆಲವು ಯೋಜನೆಗಳನ್ನು ಅವರ ಮನೆ ಮನೆಗೆ ಮುಟ್ಟಿಸಲು ಪ್ರಾಮಾಣಿಕ ಪ್ರಯತ್ನ ಮಾಡುವಲ್ಲಿ ನಮ್ಮ ಸಂಘದ ಪದಾಧಿಕಾರಿಗಳು ಮುಂದಾಗಬೇಕು ಎಂದು ಅಭಿಪ್ರಾಯಪಟ್ಟರು ಕುಷ್ಟಗಿ ತಾಲೂಕಿನಲ್ಲಿ ಕೃಷ್ಣ ಬಿಸ್ಕಿಂ ಯೋಜನೆಯ ಇನ್ನು ಪೂರ್ಣಗೊಳ್ಳದೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದೆ ಸರ್ಕಾರಗಳು ನಿರ್ಲಕ್ಷ ತಾಳುತ್ತಿದ್ದು ಮುಂಬರುವ ದಿನಗಳಲ್ಲಿ ನಮ್ಮ ಸಂಘದ ನೇತೃತ್ವದಲ್ಲಿ ರೈತರ ಹೆಚ್ಚಿನ ಪ್ರಮಾಣದಲ್ಲಿ ಸಭೆ ಸೇರಿ ಹೋರಾಟ ಕೈಗೊಳ್ಳಲಾಗುವುದೆಂದು ಇದೆ.

ಸಂದರ್ಭದಲ್ಲಿ ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ಎಚ್ಚರಿಸಿದರು ಸಭೆಯಲ್ಲಿ ವಿವಿಧ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಆದೇಶದ ಪ್ರತಿಗಳನ್ನು ನೀಡಲಾಯಿತು ಈ ಒಂದು ಕಾರ್ಯಕ್ರಮದಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷ ದೊಡ್ಡ ಬರಮಣ್ಣ ಸಿಂಗ್ರಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹನುಮೇಶ ಎಸ್ ಹೆಚ್ ಕೊಪ್ಪಳ ಜಿಲ್ಲಾ ಕಾರ್ಯಧ್ಯಕ್ಷ ಹೊನ್ನಪ್ಪ ಎಚ್ ತಳವಾರ ಅಡವಿಬಾವಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಮಲ್ಲಿಕಾರ್ಜುನ ದೋಟಿಹಾಳ ತಾಲೂಕು ಘಟಕದ ಪ್ರಮುಖ ಹನುಮಗೌಡ ಹಿರೇಮನಿ ವೀರೇಶ ನಂದಿಹಾಳ ಈರಪ್ಪ ಕಲ್ಗುಡಿ ಚಂದ್ರಶೇಖರ್ ಪಾಟೀಲ್ ಶಿವಶರಣಗೌಡ ಪಾಟೀಲ್ ಛತ್ರಪ್ಪ ಮಾರುತಿ ಗುಮಗೇರಾ ಕಳಕಪ್ಪ ಅಳ್ಳಳ್ಳಿ ಕಾಂತಪ್ಪ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

## ಛಲವಾದಿ ಮಹಾಸಭಾ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳ ನೇಮಕ

ನೈಜ್ಯ ದೆಸೆ ನ್ಯೂಸ್



**ಮಸ್ಕಿ: ಛಲವಾದಿ ಮಹಾಸಭಾ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಕೆ.ನಾಗಲಿಂಸ್ವಾಮಿ ತಿಳಿಸಿದರು. ಪಟ್ಟಣದ ತುಂಗಭದ್ರ ಎಡದಂಡೆ ನಾಲೆಯ ಪಕ್ಕದಲ್ಲಿರುವ ಸರ್ಕಿಟ್‌ಹೌಸ್‌ನಲ್ಲಿ ಶನಿವಾರ ಸಮಾಜದವರ ಸಭೆ ನಡೆಸಿ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದ ಎಂದು ತಿಳಿಸಿದರು.**

ನೂತನ ಪದಾಧಿಕಾರಿಗಳು: ಮೌನೇಶ ದೊಡ್ಡಮನಿ ಅಮೀನಗಡ (ಅಧ್ಯಕ್ಷ), ಯಂಕೋಬ ಯದ್ದಲದಿನ್ನಿ, ಶಿವಪ್ಪ ಯಕ್ಲಾಸಪುರ (ಉಪಾಧ್ಯಕ್ಷರಾಗಿ), ಹುಲುಗಪ್ಪ ಹಸಮಕಲ್ (ಪ್ರಧಾನ ಕಾರ್ಯದರ್ಶಿ), ಹುಚ್ಚರೆಡ್ಡಿ ಮೆದಕಿನಾಳ (ಸಂಘಟನಾ ಕಾರ್ಯದರ್ಶಿ), ವಿನೋದ್ ಗೋನಾಳ (ಸಹ ಕಾರ್ಯದರ್ಶಿ), ರವಿ (ಖಜಾಂಚಿ), ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ನೀಲಕಂಠ ರಂಗಾಪೂರ, ಮೌನೇಶ ಬೆಂಚಮರಡಿ, ರಾಜು ತೋರಣದಿನ್ನಿ, ನಾಗಲಿಂಗಪ್ಪ ಪಾಮನಕಲ್ಲೂರು, ಶಿವಪುತ್ರಪ್ಪ, ಬಸಲಿಂಗಪ್ಪ ಅವರನ್ನು ನೇಮಿಸಿ ಸಮಾಜದ ಸಂಘಟನೆಗೆ ಹೆಚ್ಚು ಒತ್ತು ನೀಡುವ ಮೂಲಕ ಸಮಾಜದ ಜನರ ಆಶೋತ್ತರಗಳಿಗೆ ಸ್ಪಂದಿಸುವಂತೆ ನೂತನ ಸಮಿತಿಗೆ ಸೂಚಿಸಿದ್ದಾರೆ.

ಈ ಸಂದರ್ಭದಲ್ಲಿ ಛಲವಾದಿ ಮಹಾಸಭಾದ ಜಿಲ್ಲಾ ಉಪಾಧ್ಯಕ್ಷ ಹನುಮಂತಪ್ಪ ಗೋಮರ್ಸಿ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ನರಸಪ್ಪ ಕಟ್ಟಿಮನಿ, ಬಸವರಾಜ ಇರಕಲ್, ಹುಚ್ಚರೆಡ್ಡಿ ಹಿರೇದಿನ್ನಿ, ವಿರುಪಣ್ಣ ಬೂದಿವಾಳ, ನಾಗರತ್ನ ಕಟ್ಟಿಮನಿ, ಅಮರೇಶ ಪಾಮನಕಲ್ಲೂರು ಸೇರಿದಂತೆ ಇನ್ನಿತರರಿದ್ದರು.

## ನೀರ್ ಮಾನ್ವಿ ಗ್ರಾಮದಲ್ಲಿ ನಡೆದ 11ನೇ ಮಾನ್ವಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವು ಸಾಹಿತ್ಯಾಭಿಮಾನಿಗಳ ಹೃದಯಗಳಲ್ಲಿ ಹೊಸ ಉತ್ಸಾಹ ತುಂಬಿತು.

ನೈಜ್ಯ ದೆಸೆ ನ್ಯೂಸ್






**ಮಾನವಿ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೀರ್ ಮಾನ್ವಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ನೀರ್ ಮಾನ್ವಿ ಗ್ರಾಮದಲ್ಲಿ 11ನೇ ಮಾನ್ವಿ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪರಿಷತ್ತಿನ ಸಭಾ ನಾಯಕರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್ ಎಸ್ ಬೋಸರಾಜು ಜೀ ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ ಹಂಪಯ್ಯ ನಾಯಕ್ ಉಪಸ್ಥಿತರಿದ್ದರು.**

ಈ ಸಂದರ್ಭದಲ್ಲಿ ಉದ್ಘಾಟನಾ ನುಡಿಯನ್ನು ನೋಡಿದ ಮಾನ್ಯ ಸಚಿವರು ಕನ್ನಡ ಸಾಹಿತ್ಯ ಪರಿಷತ್ತಿನ ಸತತವಾಗಿ ಪರಿಷತ್ತಿನ ಕೆಲಸ ಸಾಗುತ್ತಿರಬೇಕು ಕನ್ನಡ ನಾಡು ನುಡಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಪ್ರವರ್ಧಮಾನಕ್ಕೆ ತರುವ ಪ್ರಮುಖ ಸಂಸ್ಕೃತಿ ಸಂಸ್ಥೆಯಾಗಿದೆ ರಾಯಚೂರು ಜಿಲ್ಲೆಯಲ್ಲಿ 2016ರ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅತ್ಯಂತ ಯಶಸ್ವಿಯಾಗಿ ನಡೆದಿರುವುದು ಮತ್ತು ಮಾನ್ವಿಯಲ್ಲಿ 2006ರಲ್ಲಿ ರಾಯಚೂರು ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನವು ನಮ್ಮ ಅವಧಿಯಲ್ಲಿ ನಡೆದಿರುವುದು ಮತ್ತು ಎಂತಹದೇ ಸಂದರ್ಭದಲ್ಲಿ ನಮ್ಮ ನಾಡಿನ ರಕ್ಷಣೆಯ ಬಗ್ಗೆ ನಾವು ಜಾಗೃತರಾಗಿರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಸಕರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು ಜಿಲ್ಲೆಯಾದ್ಯಂತ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆ ಕ್ಷಮಿಸುತಿದೆ ಇದುವರೆಗೆ 11 ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ಆಚರಿಸಿದೆ ಆ ಮೂಲಕ ಜಿಲ್ಲೆಯ ಕವಿಗಳಿಗೆ ಹೊಸ ಅವಕಾಶ ಕಲ್ಪಿಸಿದೆ ಸಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಮ್ಮ ನೀಡಿದೆ 2006ರಲ್ಲಿ ನನ್ನ ರಾಜ-ಕೀಯ ಗುರುಗಳಾದ ಎನ್ ಎಸ್ ಬೋಸರಾಜು ಅವರು ಶಾಸಕರಾಗಿದ್ದ ಸಂದರ್ಭದಲ್ಲಿ ಮಾನ್ವಿಯಲ್ಲಿ ನಡೆದ ಆರನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮೂರು ದಿನಗಳ ಕಾಲ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನ ಇಡೀ ರಾಜ್ಯವೇ ತೆರಿಗೆ ನೋಡುವಂತೆ ಅತ್ಯಂತ ಯಶಸ್ವಿಯಾಗಿ ಜರುಗಿತು ಮಾನ್ವಿ ತಾಲೂಕ್ ಕನ್ನಡ ಸಾಹಿತ್ಯ ಪರಿಷತ್ತು ಕೂಡ ತಾಲೂಕು ಮಟ್ಟದಲ್ಲಿ ನಾಡು ನುಡಿ ಮತ್ತು ಸಂಸ್ಕೃತಿಯ ಸಂರಕ್ಷಣೆ ಕಾರ್ಯ ಮಾಡುತ್ತದೆ.

ಸಾಹಿತ್ಯ ಬೆಳವಣಿಗೆಗಳಿಗೆ ಅನೇಕ ರೀತಿಯ ಕವಿಗೋಷ್ಠಿ ಸಮ್ಮೇಳನ ದತ್ತಿ ಉಪನ್ಯಾಸ ಹಾಗೂ ಸಂಸ್ಕೃತಿಯ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಪರಿಷತ್ತನ್ನು ಕ್ರಿಯಾಶೀಲ ಉತ್ಸಾಹದಿಂದ ಸಾಗುತ್ತಿದೆ ತಾಲೂಕು ಪರಿಷತ್ತು ವತಿಯಿಂದ ಇದುವರೆಗೆ ಮಾನ್ವಿ ತಾಲೂಕಿನಲ್ಲಿ 10 ತಾಲೂಕ್ ಮಟ್ಟದ ಸಾಹಿತ್ಯ ಸಮ್ಮೇಳನ ಹಾಗೂ ಒಂದು ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರುಗಿದೆ ಈಗ 11ನೇ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರುಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

*ಈ ಸಂದರ್ಭದಲ್ಲಿ ಸಾಹಿತ್ಯ ಪೂಜ್ಯಶ್ರೀ ಬ್ರಹ್ಮ ವಿರೂಪಾಕ್ಷ ಪಂಡಿತರಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕಲ್ಮಠ ಮಾನ್ವಿ, ಜನಾಬ್ ಮುಫ್ತಿ ಮೌಲಾನಾ ಸೈಯದ್ ಹಸನ್ ಜಿಶಾನ್ ಖಾದ್ರಿ ಮಾನ್ವಿ ಒಂದನೆಯ ಫಾದರ್ ವಿನಸ್ಸೆಂಟ್ ಸುರೇಶ್ ಸೆಂಟ್ ಮೇರಿಸ್ ಚರ್ಚ್ ಮಾನ್ವಿ, ಪೂಜ್ಯ ಶ್ರೀ ದೇವೇಂದ್ರಪ್ಪ ತಾತನವರು ಶ್ರೀ ಸಿದ್ದಾರೂಢ ಮಠ ನೀರ ಮಾನ್ವಿ, ಸಮ್ಮೇಳನದ ಅಧ್ಯಕ್ಷರಾದ ಡಾಕ್ಟರ್ ಬಸವ ಪ್ರಭು ಪಾಟೀಲ್ ಬೆಟ್ಟದೂರು, ಸಿದ್ದರಾಮ್ ಹೊನ್ನಕಲ್,ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರಂಗಣ್ಣ ಅಲುಂಡಿ, ಮಾನ್ವಿ ತಾಲೂಕ ಅಧ್ಯಕ್ಷರಾದ ಶರಣಬಸವ ನೀರ್ ಮಾನ್ವಿ, ಮಾಜಿ ಶಾಸಕರುಗಳಾದ ಬಸನಗೌಡ ಬ್ಯಾಗವಾಟ್ ,ಗಂಗಾಧರ್ ನಾಯಕ್, ರಾಜ ವೆಂಕಟಪ್ಪ ನಾಯಕ್,ರೌಡ್ರು ಮಹಂತೇಸ್ವಾಮಿ,ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷರಾದ ಚನ್ನಪ್ಪ ಗೌಡ ಬೆಟ್ಟದೂರು, ಶ್ರೀ ರಾಮುಲು ನೀರ್ ಮಾನ್ವಿ, ಗೋಪಾಲ್ ನಾಯಕ್ ನೀರ್ ಮಾನ್ವಿ, ಬಡ್ಡು ಸಾಬ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಸಿದ್ದರಾಮಯ್ಯ,ವಕೀಲರಾದ ಗುಮ್ಮ ಬಸವರಾಜ್, ಶರಫೋದ್ದೀನ್ ಪೋತ್ನಾಳ, ರಾಜ ಸುಭಾಷ್ ಚಂದ್ರ ನಾಯಕ್, ಕೆ ಶಾಂತಪ್ಪ ರೈಚೂರ್ ದೊಡ್ಡಬಸಪ್ಪ ಗೌಡ ಭಗವತಿ, ಅಬ್ದುಲ್ ಗಫೂರ್ ಸಾಬ್ ಬಿ ಕೆ ಅಂಬರೀಶಪ್ಪ ವಕೀಲರು, ಲಕ್ಷ್ಮಣ್ ಜಾನೇಕಲ್, ತಾಯಪ್ಪ ಬಿ ಹೊಸೂರ್, ಶ್ರೀಶೈಲ್ ಗೌಡ, ಮಲ್ಲಿಕಾರ್ಜುನಗೌಡ ಪೋತ್ನಾಳ,ಸತ್ತಾರ್ ಬಂಗ್ಲೆವಲೆ, ಬಾಲಾಜಿ ಸಿಂಗ್,ಗ್ರಾಮದ ಮುಖಂಡರುಗಳು ಇನ್ನಿತರರು ಉಪಸ್ಥಿತರಿದ್ದರು.